ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಡಿಸೆಂಬರ್ 2019


॥ ಧಿಯೋ ಯೋನಃ ಪ್ರಚೋದಯಾತ್ ॥

ಸ್ಥಾನಿಕ ಬ್ರಾಹ್ಮಣರ ವಿಶ್ವಕೋಶದಲ್ಲಿ ನಿಮ್ಮ ವಿಳಾಸವನ್ನು ನೋಂದಾಯಿಸಿರಿ
ನಿಮ್ಮ ಮೊಬೈಲ್‌ಗೆ
STHANIKA
PLAY STOREನಿಂದ STHANIKA ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳಿ
ಸಮಾಜಬಾಂಧವರೊಡನೆ ಸದಾ ಸಂಪರ್ಕದಲ್ಲಿರಿ

Regn.No.KAR/KAN/2000/2758 ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-19 ಸಂಚಿಕೆ-12 ಪುಟಗಳು-8 Registered Under No.UDP/1260/2018-2020 Licenced to Post without Prepayment Licence No. SK/WPP/UDP/81/2018-20

## ಪುರಿ ಶಂಕರಾಚಾರ್ಯ ಶ್ರೀ ಶ್ರೀ ನಿಶ್ಚಲಾನಂದ ಸರಸ್ವತೀ ಮಹಾಸ್ವಾಮಿಗಳು ಉಡುಪಿಯಲ್ಲಿ







ಆದಿಶಂಕರರಿಂದ ಸ್ಥಾಪಿತ ಚತುರಾಮ್ನಾಯ ಪೀಠಗಳಲ್ಲಿ ಒಂದಾದ ಪುರಿ ಗೋವರ್ಧನ ಪೀಠದ ಪೀಠಾಧೀಶ್ವರ ಶ್ರೀ ಶ್ರೀ ನಿಶ್ಚಲಾನಂದ ಸರಸ್ವತೀ ಮಹಾಸ್ವಾಮಿಗಳವರು ತಮ್ಮ ದಕ್ಷಿಣ ಭಾರತ ವಿಜಯಯಾತ್ರೆಯಲ್ಲಿ ಆಂಧ್ರ, ತಮಿಳ್ನಾಡು, ಕೇರಳ ರಾಜ್ಯಗಳ ಪ್ರವಾಸವನ್ನು ಕೈಗೊಂಡು ದಿನಾಂಕ 27–11–2019ರಂದು ಬೆಳಿಗ್ಗೆ ಎರ್ನಾಕುಲಂನಿಂದ ರೈಲಿನಲ್ಲಿ ಉಡುಪಿಗೆ ಆಗಮಿಸಿದರು. ಶ್ರೀ ಶ್ರೀಗಳ ಶಿಷ್ಯರಾದ ಶ್ರೀ ಶ್ರೀ ನಿರ್ವಿಕಲ್ಪಾನಂದ ಸರಸ್ವತೀ ಸ್ವಾಮೀಜಿ, ಆಪ್ತ ಕಾರ್ಯದರ್ಶಿ ಶ್ರೀ ಪ್ರೇಮಚಂದ ಝಾ ಮತ್ತು ಪರಿವಾರದವರು ಜೊತೆಯಲ್ಲಿದ್ದರು.

**ರೈಲು ನಿಲ್ದಾಣದಲ್ಲಿ ಸ್ವಾಗತ :–** ಬೆಳಿಗ್ಗೆ 6.45ಕ್ಕೆ ಉಡುಪಿ ಇಂದ್ರಾಳಿ ರೈಲು ನಿಲ್ದಾಣಕ್ಕೆ ಆಗಮಿಸಿದ ಶ್ರೀ ಶ್ರೀಗಳನ್ನು ಸ್ವಾಗತ ಸಮಿತಿಯ ಪದಾಧಿಕಾರಿಗಳು ಮತ್ತು ಇತರ ಗಣ್ಯರು ಸ್ವಾಗತಿಸಿ, ಪೂರ್ವ ನಿರ್ಧರಿತ ಮಂಚಿಯ ಶ್ರೀ ಸುವರ್ಧನ ನಾಯಕ್‌ರವರ ನಿವಾಸದಲ್ಲಿ ವಾಸ್ತವ್ಯಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಶ್ರೀ ಶ್ರೀಗಳು ತಮ್ಮ ನಿತ್ಯಾನುಷ್ಠಾನದ ನಂತರ ಮಧ್ಯಾಹ್ನದ ಭಿಕ್ಷೆ ಸ್ವೀಕರಿಸಿದರು. ಸಂಜೆ 4.00 ಗಂಟೆಗೆ ಉಡುಪಿಯ ಶ್ರೀಕೃಷ್ಣ ದೇವಾಲಯಕ್ಕೆ ತೆರಳಿದರು.

**ಉಡುಪಿ ಶ್ರೀಕೃಷ್ಣನ ದರ್ಶನ :–** ಉಡುಪಿ ಶ್ರೀ ಕೃಷ್ಣ ದೇವಾಲಯಕ್ಕೆ ಆಗಮಿಸಿದ ಶ್ರೀ ಶ್ರೀಗಳನ್ನು ಪರ್ಯಾಯ ಶ್ರೀ ಪಲಿಮಾರು ಮಠಾಧೀಶರು ಹಾಗೂ ಇತರ ಮಠಾಧಿಪತಿಗಳು ಜತೆಗೂಡಿ ಸ್ವಾಗತಿಸಿ ಕನಕನ ಕಿಂಡಿ ಮತ್ತು ನವಗ್ರಹ ಕಿಂಡಿಗಳ ಮೂಲಕ ಶ್ರೀಕೃಷ್ಣನ ದರ್ಶನ ಮಾಡಿಸಿದರು. ಅಲ್ಲಿ ಪ್ರಸಾದ ಸ್ವೀಕರಿಸಿದ ಶ್ರೀ ಶ್ರೀಗಳು ಶ್ರೀ ಪೇಜಾವರ ಮಠಾಧೀಶರ ಆಹ್ವಾನದಂತೆ ಪೇಜಾವರ ಮಠದಲ್ಲಿ ಶ್ರೀ ಶ್ರೀ ವಿಶ್ವೇಶ ತೀರ್ಥರೊಂದಿಗೆ ಕುಳಿತು ಉಭಯ ಕುಶಲೋಪರಿ ಮಾತನಾಡುತ್ತಾ, ದೇಶದ ಹಲವು ಮುಖ್ಯ ಧಾರ್ಮಿಕ ವಿಚಾರಗಳ ಬಗ್ಗೆ ಪರಸ್ಪರ ವಿನಿಮಯ ಮಾಡಿಕೊಂಡರು.

**ಸನಾತನ ಧರ್ಮ ಸಭಾ ಸಂದೇಶ :–** ನಂತರ ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಮಂಟಪಕ್ಕೆ ಆಗಮಿಸಿದ ಶ್ರೀ ಶ್ರೀಗಳನ್ನು ಸಾಂಪ್ರದಾಯಿಕ ಪೂರ್ಣಕುಂಭ ಸ್ವಾಗತದೊಂದಿಗೆ ಶ್ರೀ ಶಾರದಾ ದೇವಾಲಯಕ್ಕೆ ಬರಮಾಡಿಕೊಳ್ಳಲಾಯಿತು. ಶ್ರೀ ಶಾರದಾ ಮಾತೆಗೆ ಪೂಜೆ ಸಲ್ಲಿಸಿದ ಶ್ರೀಗಳು ಶಾರದಾ ಮಂಟಪದಲ್ಲಿ ಸೇರಿದ್ದ ಸಾವಿರಾರು ಭಕ್ತ ಬಾಂಧವರ ಸಮ್ಮುಖ ಸಾರ್ವಜನಿಕ ಸನ್ಮಾನವನ್ನು ಸ್ವೀಕರಿಸಿದರು. ನಂತರ ಧರ್ಮ ಸಂದೇಶವನ್ನು ನೀಡಿದ ಶ್ರೀಗಳು ನೆರೆದಿದ್ದ ಸಾರ್ವಜನಿಕರ ಎಲ್ಲಾ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಿದರು.

**ಸಂತರಿಗೆ ರಾಜಕೀಯ ಬೇಡ:–** "ಧಾರ್ಮಿಕ ವಿಚಾರಗಳಲ್ಲಿ ಸಂತರ ನಿರ್ಧಾರವೇ ಅಂತಿಮವಾಗಿರಬೇಕು. ಅಂತಿರುವಾಗ ಸಂತರಿಗೆ ರಾಜಕೀಯ ಸಲ್ಲದು. ಇನ್ನು ಅಯೋಧ್ಯೆ ವಿಚಾರದಲ್ಲಿ ಸುಪ್ರಿಂಕೋರ್ಟ್ ತೀರ್ಪು ಸರಿಯಲ್ಲ. ಅಲ್ಲದೆ ಜಗತ್ತಿನಲ್ಲಿ ಸನಾತನ ವೇದ ಸಂಬಂಧಿತ ಶಾಸನಗಳು ಮತ್ತು ಆಚಾರ್ಯ ಪೀಠಗಳು ಶಕ್ತಿ ಹೀನವಾದಾಗ ಸ್ತ್ರೀ ದೌರ್ಜನ್ಯದಂತಹ ಸಾಮಾಜಿಕ ಪಿಡುಗುಗಳು ಸಮಾಜದಲ್ಲಿ ತಲೆ ಎತ್ತುತ್ತವೆ" ಎಂದು ಶ್ರೀ ಶ್ರೀಗಳು ಕೇಳುಗರ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಿದರು.

ಈ ಸಭೆಯಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಉಡುಪಿ ಶಾಸಕ ಶ್ರೀ ಕೆ. ರಘುಪತಿ ಭಟ್ ಸ್ವಾಗತಿಸಿದರು. ವೇದಮೂರ್ತಿ ಪಾವಂಜೆ ವಾಗೀಶ ಶಾಸ್ತ್ರಿಯವರು ಶ್ರೀಗಳ ಸನ್ಮಾನ ಪತ್ರ ವಾಚಿಸಿದರು. ಕಾರ್ಯದರ್ಶಿ ರಾಘವೇಂದ್ರ ಕಿಣಿ ವಂದಿಸಿದರು. ಪ್ರೋ. ಬಾಲಕೃಷ್ಣ ಮದ್ದೋಡಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಪ್ರಧಾನ ಕಾರ್ಯದರ್ಶಿ ಶ್ರೀ ಪ್ರಫುಲ್ಲಚಂದ್ರ ರಾಯರು ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಸಂಯೋಜನೆ ಮಾಡಿದ್ದರು.

**ಸಂವಾದ ಕಾರ್ಯಕ್ರಮ:–** ದಿನಾಂಕ 28–11–2019ರಂದು ಬೆಳಿಗ್ಗೆ ಶ್ರೀ ಶ್ರೀಗಳು

(3ನೇ ಪುಟಕ್ಕೆ...)

**ಯುವ ವೇದಿಕೆ, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ.)**
ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ

ನಮ್ಮ ಸಂಘದ ಯುವ ವೇದಿಕೆಯ ವತಿಯಿಂದ ನಮ್ಮ ಸಮಾಜ ಬಾಂಧವರಿಗೆ
ದಿನಾಂಕ 02–02–2020ನೇ ರವಿವಾರದಂದು
ಎಂ.ಜಿ.ಎಂ. ಕಾಲೇಜು, ಉಡುಪಿ ಇದರ ಕ್ರೀಡಾಂಗಣದಲ್ಲಿ
**ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2020ನ್ನು**
ಹಾಗೂ **ಮಹಿಳಾ ವೇದಿಕೆಯ ವತಿಯಿಂದ**
ತಾ.02-02-2020ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 9-00ರಿಂದ
**ಮಹಿಳೆಯರು ಮತ್ತು ಮಕ್ಕಳಿಗಾಗಿ ಶ್ರೀ ಶಾರದಾ ಮಂಟಪದಲ್ಲಿ**
**ವಿವಿಧ ಒಳಾಂಗಣ ಕ್ರೀಡಾ ಸ್ಪರ್ಧೆಗಳನ್ನು**
ಏರ್ಪಡಿಸಲಾಗಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.
– ಅಧ್ಯಕ್ಷರು ಮತ್ತು ಸಂಚಾಲಕರು : ಮಹಿಳಾ ವೇದಿಕೆ, ಯುವ ವೇದಿಕೆ ಮತ್ತು ಕ್ರೀಡಾ ವೇದಿಕೆ

ಆಸಕ್ತ ತಂಡಗಳು ಸಂಘದ ಕಾರ್ಯದರ್ಶಿ ಶ್ರೀ ಯು.ಅರವಿಂದ ಕುಮಾರ್ (9343560647), ಯುವವೇದಿಕೆಯ ಅಧ್ಯಕ್ಷರಾದ ಡಾ. ಸಂತೋಷ್ ರಾವ್ (9900411040), ಮೆನೇಜರ್ ಶ್ರೀ ಅಜಿತ್ ರಾವ್ (9448108920) ಇವರಲ್ಲಿ ತಮ್ಮ ತಂಡದ ಹೆಸರನ್ನು ದಿನಾಂಕ 31-01-2020ರ ಒಳಗೆ ನೋಂದಾಯಿಸಿಕೊಳ್ಳಬೇಕಾಗಿ ವಿನಂತಿ.

**ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.) ಮಂಗಳೂರು** ಹಾಗೂ
**ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಬೆಂಗಳೂರು**
ಇವರ ಸಹಯೋಗದಲ್ಲಿ
2020ನೇ ಇಸವಿ ಜನವರಿ ತಿಂಗಳ 11 ಮತ್ತು 12ನೇ ತಾರೀಕಿನಂದು
ಬೆಂಗಳೂರಿನ ಕೋಡಿಗೆಹಳ್ಳಿಯ ಜ್ಞಾನಶಕ್ತಿ ಮಂಟಪದಲ್ಲಿ
**ವಿಶ್ವ ಸ್ಥಾನಿಕ ಬೃಹತ್ ಸಮಾವೇಶ–2020**

ಬಂಧುಗಳೇ,
ಎರಡೂ ದಿನಗಳ ಸ್ಥಾನಿಕ ಬ್ರಾಹ್ಮಣರ ಉತ್ಸವದಲ್ಲಿ ಭಾಗಿಗಳಾಗಿ ಎಲ್ಲಾ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾಗಬೇಕಾಗಿ ಹಾಗೂ ತನು–ಮನ–ಧನಗಳಿಂದ ಸಹಕರಿಸಬೇಕಾಗಿ ವಿನಂತಿ.

ಅಧ್ಯಕ್ಷರು/ ಕಾರ್ಯದರ್ಶಿ/ ಪದಾಧಿಕಾರಿಗಳು/ ಸದಸ್ಯ ಸಂಘಗಳು
ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ (ರಿ). ಬೆಂಗಳೂರು
ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ). ಮಂಗಳೂರು

ಶ್ರೀ ರವೀಂದ್ರನಾಥ ರಾವ್ ಬೆಳ್ಳೆ
ಮೊ : 9845050208
ಶ್ರೀ ಕೃಷ್ಣಾನಂದ ರಾವ್
ಮೊ : 9448484385

ಶ್ರೀ ಎನ್.ಕೆ.ಜಗನ್ನಿವಾಸ ರಾವ್, ಪುತ್ತೂರು
ಮೊ : 94482260888
ಶ್ರೀ ಎಂ. ದೇವಾನಂದ ಭಟ್, ಬೆಳುವಾಯಿ
ಮೊ : 9845644556

# ಬೆಂಗಳೂರಿನಲ್ಲಿ ಭೇಟಿಯಾಗೋಣ...

–ಕೃಷ್ಣ ಕುಮಾರ್ ರಾವ್, ಮಟ್ಟು.

‘ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶ–2020’ ಬೆಂಗಳೂರಿನ ಕೋಡಿಗೆ ಹಳ್ಳಿಯಲ್ಲಿ 2020ರ ಜನವರಿ 11 ಮತ್ತು 12ರಂದು ನೆರವೇರಲಿದೆ. ಈಗಾಗಲೇ ಈ ಸಮ್ಮೇಳನಕ್ಕೆ ಬಹಳಷ್ಟು ತಯಾರಿ – ಪ್ರಚಾರ ಒದಗಿಸಿದ್ದಾಗಿದೆ. ಹೀಗಾಗಿ ನಮ್ಮ ಎಲ್ಲ ಸ್ಥಾನಿಕ ಬಂಧುಗಳಿಗೆ ಈ ವಿಚಾರ ಅವಗಾಹನೆಗೆ ಬಂದಿದೆ. ಆದರೂ ಸಮ್ಮೇಳನದಲ್ಲಿ ಭಾಗಿಯಾಗುವ ಬಗ್ಗೆ ನಮ್ಮ ಕೆಲವು ಬಂಧುಗಳಲ್ಲಿ ಅಸಡ್ಡೆ ಇದ್ದಂತೆ ತೋರುತ್ತದೆ. ಮೊದಲನೆಯದಾಗಿ ಬೆಂಗಳೂರಿಗೆ ಹೋಗಿ ನಾವು ಮಾಡಬೇಕಾದುದು ಏನು? ಮತ್ತು ಎರಡನೆಯದಾಗಿ ನಮ್ಮಿಂದ ಅಲ್ಲಿ ಏನು ಮಾಡಲು ಸಾಧ್ಯ? ಎಂಬ ಪ್ರಶ್ನೆಗಳು ಈ ಅಸಡ್ಡೆಗೆ ಕಾರಣವಾಗಿರಬಹುದಾದ ವಿಚಾರಗಳಾಗಿದ್ದಂತೆ ತೋರುತ್ತದೆ.

**ಮೊದಲ ಮಾತು :–**

ಪ್ರಿಯ ಬಂಧುಗಳೇ,

ನಮ್ಮ ತುಳು ನಾಡಿನ ಅನೇಕ ಸಾಮಾಜಿಕ ಸಂಘಟನೆಗಳನ್ನೊಮ್ಮೆ ತಿರುಗಿ ನೋಡೋಣ. ಉದಾಹರಣೆಗೆ ಮೊಗವೀರ ಸಮಾಜ, ಬಿಲ್ಲವ ಸಂಘಟನೆ, ಜಿ ಎಸ್ ಬಿ ಸಮಾಜ ಮೊದಲಾದ ಬಲಿಷ್ಠ ಸಂಘಟನೆಗಳು ಇಂದು ಮಾಡಿರುವ, ಮಾಡುತ್ತಿರುವ ಸಾಧನೆಗಳನ್ನು ನಾವು ಸಾಕಷ್ಟು ಪಟ್ಟಿ ಮಾಡಬಹುದು. ಅದೆಷ್ಟೋ ಹೆಸರಾಂತ ಶಿಕ್ಷಣ ಸಂಸ್ಥೆಗಳನ್ನೋ, ಅಲ್ಲಲ್ಲಿ ವ್ಯಾಪಾರೀ ಸಂಕೀರ್ಣವನ್ನೋ, ಸಭಾಗೃಹವನ್ನೋ ನಡೆಸುತ್ತಿರುವುದು, ಕೋಟಿಗಟ್ಟಲೆಯಷ್ಟು ಧನವನ್ನು ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿ ಪ್ರೋತ್ಸಾಹಿಸುವುದು, ಅವರದೇ ಸಮಾಜದ ಬಡವರಿಗೆ ಮನೆ ನಿರ್ಮಾಣ, ವೈವಾಹಿಕ ಸಹಾಯ, ವೈದ್ಯಕೀಯ ನೆರವು ಮೊದಲಾದ ಸೌಲಭ್ಯಗಳನ್ನು ಪ್ರತಿವರ್ಷ ನೀಡುವುದನ್ನು ಗಮನಿಸುತ್ತೇವೆ. ಅಲ್ಲದೆ ಬಲಿಷ್ಠವಾಗಿರುವ ಈ ಸಂಘಟನೆಗಳು ಸರಕಾರದಿಂದ ಮತ್ತು ಇತರ ಸಂಸ್ಥೆಗಳಿಂದ ಅವಶ್ಯ ಸೌಲಭ್ಯಗಳನ್ನು ಪಡೆಯುವಲ್ಲಿ ಸಫಲತೆಯನ್ನೂ ಪಡೆದಿವೆ. ಮತ್ತು ಇನ್ನೂ ಎತ್ತರಕ್ಕೆ ಬೆಳೆಯುತ್ತಿವೆ.

ನಾವೂ ನಮ್ಮ ಸಮಾಜದ ಸಂಘಟನೆಯಲ್ಲಿ ಇಂತಹ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇವೆ. ಆದರೆ ಉಳಿದ ಸಂಘಟನೆಗಳಿಗೆ ಹೋಲಿಸಿದರೆ ಅದು ಬಹಳಷ್ಟು ಕಡಿಮೆಯೇ ಸರಿ. ಅವರಂತೆ ನಾವ್ಯಾಕೆ ಆ ಮಟ್ಟಕ್ಕೆ ಬೆಳೆಯಲಿಲ್ಲ? ನಮ್ಮಲ್ಲಿಯೂ ಯಾವ ಸಂಪನ್ಮೂಲಕ್ಕೂ ಕೊರತೆ ಇಲ್ಲ. ಅದೆಷ್ಟೋ ಪ್ರತಿಭಾನ್ವಿತರು, ದೊಡ್ಡ ದೊಡ್ಡ ಹುದ್ದೆಯಲ್ಲಿರುವ ಗೌರವಾನ್ವಿತರು, ಕಲಾ ಸಂಪನ್ನರು, ಧಾರ್ಮಿಕ ಪರಂಪರೆಯುಳ್ಳವರು ಇದ್ದಾರೆ. ಆದರೆ ಇಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವೆ ಸಂಘಟನೆ ಮತ್ತು ಸಂಘಟನೆಗಳ ನಡುವೆ ಸಂವಹನಗಳ ಕೊರತೆ ಬಹಳಷ್ಟು ಇದೆ. ಈ ಕೊರತೆಯನ್ನು ನೀಗಿಸಲು ಇಂತಹ ಸಮ್ಮೇಳನವೇ ಪ್ರಧಾನ ಅಸ್ತ್ರ. ಇಂತಹ ಸಮ್ಮೇಳನಗಳು ನಿಗದಿತವಾಗಿ 2–3 ವರ್ಷಗಳಿಗೊಮ್ಮೆ ನಡೆದರೆ ಮೇಲೆ ಹೇಳಿದ ಸಾಧನೆಗಳಲ್ಲಿ ಕೆಲವನ್ನಾದರೂ ಸಾಧಿಸಲು ಸಾಧ್ಯವಾದೀತು.

**ಬೆಂಗಳೂರಿನ ಸಮ್ಮೇಳನದಲ್ಲೇನಿದೆ?**

ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ) ಮಂಗಳೂರು ಇವರಿಂದ ಆಯೋಜಿಸಲ್ಪಟ್ಟ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾ (ರಿ) ಇದರ ಸಹಯೋಗದೊಂದಿಗೆ ಬೆಂಗಳೂರಿನ ಕೋಡಿಗೆ ಹಳ್ಳಿಯ ಜ್ಞಾನಶಕ್ತಿ ಮಂಟಪದಲ್ಲಿ 2020ರ ಜನವರಿ 11 ಮತ್ತು 12ರಂದು "ವಿಶ್ವ ಸ್ಥಾನಿಕ ಬ್ರಾಹ್ಮಣ ಸಮಾವೇಶ– 2020" ನೆರವೇರಲಿದೆ. ಮಹಾ ಮಂಡಲ, ಬೆಂಗಳೂರಿನ ಸಂಘಟನೆ ಮತ್ತು ನಮ್ಮ ಸಮಾಜದ ಅನೇಕ ಸಂಘಟನೆಗಳ ಪದಾಧಿಕಾರಿಗಳು ಸೇರಿ ಕಳೆದ ವರ್ಷದಿಂದಲೇ ಸಿದ್ಧತೆ ನಡೆಸುತ್ತಿದ್ದಾರೆ. ದೊಡ್ಡ ಮಟ್ಟದಲ್ಲಿ ಸಮಾಜ ಬಾಂಧವರನ್ನು ಒಂದೆಡೆ ಕ್ರೋಢೀಕರಿಸುವ ಉದ್ದೇಶವನ್ನು ಹೊಂದಿದ್ದಾರೆ. ವಿವಿಧ ಗಣ್ಯರೊಡಗೂಡಿ ಉದ್ಘಾಟನಾ ಸಮಾರಂಭ ನೆರವೇರಲಿದೆ. ಅಲ್ಲದೆ ಈ ಎರಡೂ ದಿನ "ಆಚಾರ್ಯ ಶಂಕರರು ಮತ್ತು ಅದ್ವೈತ" (ವಿಚಾರಗೋಷ್ಠಿ–1) "ಸಾಮಾಜಿಕ ಸ್ವಾಸ್ಥ್ಯದಲ್ಲಿ ಮಹಿಳೆಯರ ಪಾತ್ರ" (ವಿಚಾರಗೋಷ್ಠಿ–2) "ಸ್ಥಾನಿಕರ ಸಾಮಾಜಿಕ ಮತ್ತು ಸಂಸ್ಕೃತಿಯ ಸವಾಲುಗಳು" (ವಿಚಾರಗೋಷ್ಠಿ–3) "ಸನಾತನ ಸಂಸ್ಕೃತಿಗೆ ಯುವ ಪೀಳಿಗೆಯ ಕೊಡುಗೆ" (ವಿಚಾರಗೋಷ್ಠಿ–4) "ಸ್ಥಾನಾಚಾರ್ಯರ ಅಸ್ತಿತ್ವ ಮತ್ತು ಅಸ್ಮಿತೆ" (ವಿಚಾರಗೋಷ್ಠಿ–5) ಮೊದಲಾದ ವಿಚಾರ ಗೋಷ್ಠಿಗಳು ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರಮಂಡನೆಯಾಗಿ ಅದರ ಸಮನ್ವಯೀಕರಣ ಕಾರ್ಯಗಳೂ ನೆರವೇರಲಿವೆ.

ಇದಲ್ಲದೆ ಗೋಷ್ಠಿಗಳ ನಡುವೆ ನಾಡಿನಾದ್ಯಂತ ಆಗಮಿಸಿರುವ ಬೇರೆ ಬೇರೆ ಸಂಘಟನೆಗಳಿಂದ ಸಂಯೋಜನೆಗೊಂಡ ನೃತ್ಯ ವೈವಿಧ್ಯ, ಯಕ್ಷ ನೃತ್ಯ, ಭರತನಾಟ್ಯ, ವಿವಿಧ ಪ್ರಕಾರದ ಸಂಗೀತೋಪಕರಣಗಳ ವಾದ್ಯಗೋಷ್ಠಿ, ತೆಂಕು – ಬಡಗು ಶೈಲಿಗಳ ಯಕ್ಷಗಾನ ಪ್ರಸಂಗಗಳು, ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳು ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಗೆ ಕೈಗನ್ನಡಿಯಾಗಲಿವೆ. ಕೊನೆಯಲ್ಲಿ ವಿವಿಧ ಗಣ್ಯರನ್ನೊಳಗೊಂಡ ಸಮಾರೋಪ ಸಮಾರಂಭವಿದೆ.

ಇವಲ್ಲದೆ ಸನಾತನ ಧರ್ಮ ಬೋಧನೆಯ ಪಾಠ ಪ್ರವಚನ, ವೈವಾಹಿಕ ವೇದಿಕೆಗಳಿಂದ ವಿಚಾರ ವಿನಿಮಯ, ಪರಸ್ಪರ ಸಂಪ್ರೀತಿ, ಸಂವಹನದೊಂದಿಗೆ ವೈವಿಧ್ಯಮಯ ಮಳಿಗೆಗಳು ಸಮಾವೇಶದಲ್ಲಿ ಸಮ್ಮಿಳಿತಗೊಳ್ಳುತ್ತವೆ.

ನಮ್ಮ ಸಮಾಜವೂ ಒಂದುಗೂಡಬೇಕು, ಎಲ್ಲ ವರ್ಗದ ಸಂಪನ್ಮೂಲಗಳು ಒಂದೆಡೆ ಕೇಂದ್ರೀಕೃತವಾಗಬೇಕು. ಹತ್ತು ಹಲವು ವಿದ್ಯಾಸಂಸ್ಥೆಗಳು ಹುಟ್ಟಬೇಕು. ಅವು ಎತ್ತರಕ್ಕೆ ಬೆಳೆದು ಕೀರ್ತಿಪಡೆಯುವಂತಾಗಬೇಕು. ಅಲ್ಲಿ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಎಲ್ಲ ಸೌಲಭ್ಯಗಳೂ ಸಿಗುವಂತಾಗಬೇಕು. ವಿದ್ಯಾರ್ಥಿವೇತನ, ವಸತಿ ಸಮುಚ್ಚಯ, ಕಲಿಕಾ ಸಾಮಗ್ರಿ, ಉಪಾಹಾರ ಮತ್ತು ಭೋಜನದ ವ್ಯವಸ್ಥೆಗಳಂತಹ ಸೌಲಭ್ಯಗಳನ್ನು ಒದಗಿಸುವಲ್ಲಿ ಮುಂಚೂಣಿಗೆ ಬರಬೇಕು. ನಮ್ಮವರಲ್ಲಿರುವ ಹಿರಿಯ, ಯುವ, ಬಾಲ ಪ್ರತಿಭೆಗಳನ್ನು ಗುರುತಿಸಿಕೊಳ್ಳಲು ವೇದಿಕೆ ನಿರ್ಮಿಸಿಕೊಡಬೇಕು. ನಮ್ಮ ಸಂಸ್ಕೃತಿ–ಪರಂಪರೆಗಳನ್ನು ಯುವ ಮತ್ತು ಮುಂದಿನ ಪೀಳಿಗೆಗೆ ವರ್ಗಾಯಿಸಲು ಸದವಕಾಶ ಒದಗಿಸಿಕೊಡಬೇಕು. ಇಂದಿನ ಸಾಮಾಜಿಕ ಪಿಡುಗು ಎಂದೆನಿಸಿದ ವೈವಾಹಿಕ ಸಮಸ್ಯೆಗೆ ಒಂದು ಪರಿಹಾರ ಕಾಣಬೇಕು. ವಿವಾಹಕ್ಕೆ ಸಂಬಂಧ ಜೋಡಣೆ ಹಾಗೂ ವಿವಾಹಾನಂತರ ನವ ದಂಪತಿಗಳ ನಡುವೆ ಬರುವ ಸಮಸ್ಯೆಗಳಿಗೂ ಸ್ಪಂದಿಸುವಂತಾಗಬೇಕು. ಸಮಾಜದಲ್ಲಿರುವ ಇತರ ಯಾವುದೇ ಸಮಸ್ಯೆಗಳಿಗೆ ಸರಕಾರವಾಗಲೀ ಇತರ ಇಲಾಖೆಗಳಾಗಲೀ ಕೂಡಲೇ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡುವಂತಿರಬೇಕು. ಈ ಎಲ್ಲಾ ಸಮಸ್ಯೆಗಳಿಗೆ ಸಮಾವೇಶವು ಧ್ವನಿಯಾಗಲಿ. "ಸಂಘೇ ಶಕ್ತಿ ಯುಗೇ ಯುಗೇ" ಎಂಬಂತೆ ಮುಂದಿನ ದಿನಗಳಲ್ಲಿ ನಮ್ಮ ಎಲ್ಲಾ ಸಂಘಟನೆಗಳೂ ಮಹಾಮಂಡಲದ ಮುಂದಾಳುತ್ವದಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆಯಲು ಸಹಕಾರಿಯಾಗಬೇಕಾದರೆ ಬೆಂಗಳೂರಿನ ಸಮಾವೇಶವೇ ಪ್ರಾರಂಭ ಎನ್ನುವಂತಾಗಬೇಕು. ಮುಂದೆ ನಿಗದಿ ಪಡಿಸಿದಂತೆ ಅಲ್ಲಲ್ಲಿ ಇಂತಹ ಸಮಾವೇಶಗಳು ಕಾಲಕಾಲಕ್ಕೆ ನಡೆಯುತ್ತಿರಬೇಕು.

ಆದ್ದರಿಂದ ಜನವರಿ 11 ಮತ್ತು 12 ಕ್ಕೆ ಬೆಂಗಳೂರಿನ "ವಿಶ್ವ ಸ್ಥಾನಿಕ ಸಮಾವೇಶ–2020"ರಲ್ಲಿ ರಾಜ್ಯಾದ್ಯಂತ ಇರುವ ಮತ್ತು ರಾಜ್ಯದ ಹೊರಗಿರುವ, ವಿದೇಶಗಳಲ್ಲಿರುವ ನಮ್ಮ ಎಲ್ಲಾ ಬಂಧುಗಳು ಪಾಲ್ಗೊಂಡು ಈ ಸಮಾವೇಶವನ್ನು ಸಫಲಗೊಳಿಸೋಣ. ಇದು ನಮ್ಮದೇ ಮನೆಯ ಸಮಾರಂಭ ಎಂದು ತಿಳಿದು ಯಶಸ್ವಿಗೊಳಿಸೋಣ. ಈ ಎರಡು ದಿನಕ್ಕೆ ಯಾವುದೇ ನೆಪವನ್ನು ಹೇಳದೆ ಸಮಾವೇಶದಲ್ಲಿ ಪಾಲ್ಗೊಳ್ಳೋಣ.

ಉಡುಪಿಯ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ) ಕುಂಜಿಬೆಟ್ಟು ಇದರ ವತಿಯಿಂದ ಬೆಂಗಳೂರಿನ ಸಮಾವೇಶಕ್ಕೆ ಹೋಗಿ ಬರಲು ಅನುಕೂಲವಾಗುವಂತೆ ಬಸ್ಸಿನ ವ್ಯವಸ್ಥೆ ಮಾಡಲಾಗಿದೆ. ಬಸ್ಸು ಹಾಗೂ ವಸತಿಯ ವ್ಯವಸ್ಥೆಗಾಗಿ ಪ್ರತಿಯೊಬ್ಬರಿಗೆ ಸುಮಾರು 2000/–ರೂ. ಗಳೆಂದು ಅಂದಾಜು ಮಾಡಲಾಗಿದೆ. ಆಸಕ್ತರು ವಿವರಗಳಿಗಾಗಿ ತಾ.25–12–2019ರ ಒಳಗೆ ತಮ್ಮ ಹೆಸರನ್ನು ಶ್ರೀ ಮಂಜುನಾಥ ಹೆಬ್ಬಾರ್ (9611099894) ಅಥವಾ ಶ್ರೀ ಅಜಿತ್ ರಾವ್ (9448108920) ಇವರನ್ನು ಸಂಪರ್ಕಿಸಿ ತಿಳಿಸುವಂತೆ ಕೋರಲಾಗಿದೆ.

–ಕಾರ್ಯದರ್ಶಿ,
ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ (ರಿ).
ಕುಂಜಿಬೆಟ್ಟು, ಉಡುಪಿ.

## ಪುರಿ ಶಂಕರಾಚಾರ್ಯ ಶ್ರೀ ಶ್ರೀ ನಿಶ್ಚಲಾನಂದ ಸರಸ್ವತೀ ಮಹಾಸ್ವಾಮಿಗಳು ಉಡುಪಿಯಲ್ಲಿ

■...1ನೇ ಪುಟದಿಂದ

ಹಿಂದೂ ಸಮಾಜದ ವಿವಿಧ ಸಂಘ ಸಂಸ್ಥೆಗಳ ಗಣ್ಯರೊಂದಿಗೆ ಮುಖ್ಯ ಧಾರ್ಮಿಕ ವಿಚಾರಗಳ ಬಗ್ಗೆ ಸಮಾಲೋಚನೆ ನಡೆಸಿದರು. ಹಾಗೂ ಸಂಜೆ 4.00ಗಂಟೆಗೆ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. 29ರ ಬೆಳಿಗ್ಗೆ ಮಹಿಳೆಯರೊಂದಿಗೆ ‘ಮಾತೃ ಸಂಗಮ’ ಕಾರ್ಯಕ್ರಮವನ್ನೂ ನೆರವೇರಿಸಿಕೊಟ್ಟರು.

**ಸ್ವಾಗತ ಸಮಿತಿ:–** ಗುರುಗಳ ಉಡುಪಿ ಆಗಮನದ ವಿಚಾರ ತಿಳಿಯುತ್ತಿದ್ದಂತೆ ಈ ಬಗ್ಗೆ ಸ್ವಾಗತ ಸಮಿತಿಯೊಂದನ್ನು ರಚಿಸಬೇಕೆಂದು ಸುಮಾರು 15 ದಿನಗಳ ಮೊದಲೇ ಸಿದ್ಧತೆ ನಡೆಸಲಾಯಿತು. ಉಡುಪಿ ಶಾಸಕರಾದ ಶ್ರೀ ಕೆ ರಘುಪತಿಭಟ್‌ರವರ ಅಧ್ಯಕ್ಷತೆಯಲ್ಲಿ ಶ್ರೀ ಮಹೇಶ್ ಠಾಕೂರ್ ಕಾರ್ಯಾಧ್ಯಕ್ಷರಾಗಿ, ಶ್ರೀ ಪ್ರಫುಲ್ಲಚಂದ್ರ ರಾವ್, ಕಾರ್ಯದರ್ಶಿಯಾಗಿ, ಶ್ರೀ ಮಂಜುನಾಥ ಹೆಬ್ಬಾರ್ ಕೋಶಾಧಿಕಾರಿಯಾಗಿ, ವಿವಿಧ ಸಾಮಾಜಿಕ ಸಂಘಟನೆಗಳ ಪದಾಧಿಕಾರಿಗಳನ್ನು ಉಪಾಧ್ಯಕ್ಷರನ್ನಾಗಿಸಿ ದೊಡ್ಡ ಮಟ್ಟದ ಸ್ವಾಗತ ಸಮಿತಿ ರಚಿಸಲಾಯಿತು. ಉಡುಪಿಯ ಶ್ರೀ ಶಾರದಾ ಮಂಟಪದಲ್ಲಿ ಅದಕ್ಕಾಗಿ ಕಾರ್ಯಾಲಯವನ್ನೂ ನಿರ್ಮಿಸಿ ಉತ್ಸಾಹದಿಂದ ಕಾರ್ಯಕ್ರಮ ಸಂಘಟಿಸಲಾಯಿತು. ಅದ್ವೈತವನ್ನು ಪ್ರತಿಪಾದಿಸುವ ಅನೇಕ ಸಾಮಾಜಿಕ ಸಂಘಟನೆಗಳು ಈ ಸಮಿತಿಯಲ್ಲಿದ್ದು, ಇದೇ ಸಂಪೂರ್ಣ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣವಾಯಿತು.

ವರದಿ: ಕೃಷ್ಣ ಕುಮಾರ್ ರಾವ್, ಮಟ್ಟು

## ಕುಂದಾಪುರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಮ್ಮೇಳನ – 2019

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ) ಬೆಂಗಳೂರು ಇದರ ವತಿಯಿಂದ 10ನೇ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಮ್ಮೇಳನವು 2019ರ ಡಿಸೆಂಬರ್ 28 ಮತ್ತು 29ರಂದು ಕುಂದಾಪುರ ತಾಲೂಕು ಕೋಟೇಶ್ವರದ ಹಾಲಾಡಿಯ ಕಾಳಾವರ ವರದರಾಜ ಎಂ.ಶೆಟ್ಟಿ. ಸರಕಾರಿ ಪ್ರಥಮ ದರ್ಜೆ ಕಾಲೇಜು ಮೈದಾನದಲ್ಲಿ ಎರಡು ದಿನಗಳವರೆಗೆ ಜರಗಲಿದೆ. ತಾ.28 ರ ಬೆಳಿಗ್ಗೆ 6.00 ಗಂಟೆಯಿಂದ ಶ್ರೀ ಗಾಯತ್ರಿ ಮಹಾಯಜ್ಞ ಪ್ರಾರಂಭಗೊಂಡು 9 ಗಂಟೆಗೆ ಪೂರ್ಣಾಹುತಿಗೊಳ್ಳುತ್ತದೆ. 10.00 ಗಂಟೆಗೆ ಉದ್ಘಾಟನಾ ಸಮಾರಂಭದಲ್ಲಿ ಶೃಂಗೇರಿ ಶ್ರೀ ಗಳಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು ಉದ್ಘಾಟನೆ ಮಾಡಿ ಅನುಗ್ರಹ ಭಾಷಣ ನೀಡುವರು.

ಗಣ್ಯ ಅತಿಥಿಗಳ ಉಪಸ್ಥಿತಿಯೊಂದಿಗೆ ಜರಗುವ ಈ ಸಮಾರಂಭದಲ್ಲಿ "ಬ್ರಾಹ್ಮಣ್ಯ ಆಚರಣೆ–ರಕ್ಷಣೆ–ಸಂಘಟನೆ", "ಬ್ರಾಹ್ಮಣ ಸಮಾಜ ಸಂಘಟನೆ–ಸವಾಲುಗಳು ಮತ್ತು ಮಾಧ್ಯಮ, ಸಂಘಸಂಸ್ಥೆಗಳ ಪಾತ್ರ" ಮೊದಲಾದ ವಿಚಾರಗೋಷ್ಠಿಯಲ್ಲಿ ವಿಷಯ ಮಂಡನೆಗಳೊಂದಿಗೆ ಸಮನ್ವಯವೂ ನೆರವೇರಲಿದೆ.

ತಾ.29ರಂದು ಭವ್ಯಶೋಭಾಯಾತ್ರೆಯೂ ನೆರವೇರಲಿದ್ದು, ಕರ್ನಾಟಕ ರಾಜ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರು ಹಾಗೂ ರಾಜ್ಯದ ಹಲವು ಮಂತ್ರಿಗಳು ಮತ್ತು ರಾಜಕೀಯ ಧುರೀಣರು ಪಾಲ್ಗೊಳ್ಳಲಿದ್ದಾರೆ. ಪೂಜ್ಯರಾದ ಮಠಾಧೀಶರಿಗೆ ಗುರುವಂದನೆ, ಅನುಗ್ರಹ ಭಾಷಣ, "ವಿಪ್ರ ಶ್ರೀ ಪ್ರಶಸ್ತಿ ಪ್ರದಾನ" ಮತ್ತು ಜಿಲ್ಲೆಯ ಹಾಗೂ ರಾಜ್ಯದ ಹತ್ತು ಹಲವು ಸಾಂಸ್ಕೃತಿಕ ಪ್ರಕಾರವನ್ನೊಳಗೊಂಡ ಕಲಾ ಪ್ರದರ್ಶನಗಳೂ ನಡೆಯಲಿದೆ. ತಾ.29ರ ಸಂಜೆ ಗಂಟೆ 4.00 ರಿಂದ ಸಮಾರೋಪ ಸಮಾರಂಭದೊಂದಿಗೆ ಮುಕ್ತಾಯಗೊಳ್ಳುವ ಈ ಸಮ್ಮೇಳನದಲ್ಲಿ ಜಿಲ್ಲೆಯ ಎಲ್ಲಾ ಬ್ರಾಹ್ಮಣ ವರ್ಗದ ಪುರುಷರು, ಮಹಿಳೆಯರು, ಮಕ್ಕಳು ಪಾಲ್ಗೊಂಡು ಬ್ರಾಹ್ಮಣ ಸಮುದಾಯದ ಒಗ್ಗಟ್ಟು ಪ್ರದರ್ಶಿಸುವುದರೊಂದಿಗೆ ಮುಂದಿನ ದಿನಗಳಲ್ಲಿ ಬ್ರಾಹ್ಮಣ್ಯಕ್ಕೆ ಸರಕಾರದಿಂದ ಹಾಗೂ ಇತರ ಸಂಘಸಂಸ್ಥೆಗಳಿಂದ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುವಂತೆ ಬ್ರಾಹ್ಮಣ ವರ್ಗದ ಎಲ್ಲರೂ ಸಂಘಟಿತರಾಗಿ ಕಾರ್ಯವೆಸಗಬೇಕೆಂದು ಕಳಕಳಿಯಿಂದ ವಿನಂತಿಸಲಾಗಿದೆ.

ಶ್ರೀ ಕ್ಷೇತ್ರ ಉದಯಾದ್ರಿ

## ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ

ಪಡುಬಿದ್ರಿ, ಉಡುಪಿ ಜಿಲ್ಲೆ-574111

### ಎಳ್ಳಮಾವಾಸ್ಯೆ ಉತ್ಸವ ಮತ್ತು ಅಥರ್ವ ಶೀರ್ಷ ಸಹಸ್ರ ಮೋದಕ ಗಣಯಾಗ

**ದಿನಾಂಕ 12-12-2019 ನೇ ಮಾರ್ಗಶೀರ್ಷ ಹುಣ್ಣಿಮೆಯಿಂದ ದಿನಾಂಕ 26-12-2019 ನೇ ಎಳ್ಳಮಾವಾಸ್ಯೆವರೆಗೆ**

ಭಕ್ತಾಭಿಮಾನಿಗಳೇ,

ಸ್ವಸ್ತಿ ಶ್ರೀ ವಿಕಾರಿ ನಾಮ ಸಂವತ್ಸರದ ಮಾರ್ಗಶೀರ್ಷ ಪೂರ್ಣಿಮೆ ತಾ.12.12.2019ರಿಂದ ದಿನಾಂಕ 26-12-2019 ರ ವರೆಗೆ ಪ್ರತಿ ದಿನ ರಾತ್ರಿ ಗಂಟೆ 7.30 ಕ್ಕೆ

### ಸಾಮೂಹಿಕ ರಂಗಪೂಜಾ ಸೇವೆಯು

ಜರಗಲಿರುವುದು.

| | |
|---|---|
| **ರಂಗಪೂಜಾ ಒಂದರ ಸೇವಾ ಬಾಬ್ತು** | **ರೂ. 300/-** |
| **ಮೋದಕ ಸೇವಾ ಬಾಬ್ತು** | **ರೂ.200/-** |

ಸ್ವಸ್ತಿ ಶ್ರೀ ವಿಕಾರಿ ನಾಮ ಸಂವತ್ಸರದ ಧನುರ್ಮಾಸ ದಿನ 8 ಸಲುವ ಮಾರ್ಗಶೀರ್ಷ ಅಮಾವಾಸ್ಯೆ ದಿನಾಂಕ 26-12-2019ನೇ ಗುರುವಾರದಂದು

### ಎಳ್ಳಮಾವಾಸ್ಯೆ ಉತ್ಸವವು

ಜರಗಲಿರುವುದು.

ಶ್ರೀ ದೇವತಾ ಕಾರ್ಯಕ್ರಮದಲ್ಲಿ ಭಕ್ತಾದಿಗಳಾದ ತಾವೆಲ್ಲರೂ ಭಾಗವಹಿಸಿ, ತನು-ಮನ-ಧನಗಳಿಂದ ಸಹಕರಿಸಿ, ಗಂಧಪ್ರಸಾದವನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತೇವೆ.

| | | |
|---|---|---|
| **ಜಗದಾಭಿರಾಮ ಸ್ವಾಮಿ**<br>ಪ್ರಧಾನ ಅರ್ಚಕರು | **ಪಿ.ರಘುವೀರ ರಾವ್**<br>ಅಧ್ಯಕ್ಷರು | **ಕರುಣಾಕರ ಬೆಳ್ಳೆ**<br>ಗೌರವ ಅಧ್ಯಕ್ಷರು |
| **ಶ್ರೀನಿವಾಸ ಶರ್ಮ, ಪಾದೆಬೆಟ್ಟು**<br>ಕಾರ್ಯದರ್ಶಿ | | **ಪಿ.ಡಿ. ಶೇಖರ ರಾವ್**<br>ಖಜಾಂಚಿ |

**ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ಟೆಂಪಲ್ ಟ್ರಸ್ಟ್ (ರಿ.) ಮತ್ತು ಸರ್ವಸದಸ್ಯರು, ಊರ ಹತ್ತು ಸಮಸ್ತರು**

## ಶ್ರೀ ಶಾರದಾ ದೇವಸ್ಥಾನ, ಶ್ರೀ ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30ಕ್ಕೆ

ಪ್ರತಿ ಮಂಗಳವಾರ : **ಸೌಂದರ್ಯಲಹರಿ ಪಾರಾಯಣ** ಸಂಜೆ 5ರಿಂದ } ಮಹಿಳಾ ವೇದಿಕೆಯಿಂದ

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5ರಿಂದ }

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ

**ತಾ.13-01-2020 ಸಂಕಷ್ಟಹರ ಚತುರ್ಥಿಯಂದು ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.25-01-2020 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ತಾ.16-12-2019, ತಾ.31-12-2019 ಮತ್ತು ತಾ.15-01-2020 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

### ಜನವರಿ ತಿಂಗಳ ಶಾಶ್ವತ ಸೇವಾಕರ್ತರ ವಿವರ

1. ಗಾಯತ್ರಿ, ಚೆನ್ನೈ
2. ತನೀಶ್, ಬೆಂಗಳೂರು
3. ಯು.ಆರ್. ಜಯದೇವ್, ಬೆಂಗಳೂರು
4. ಎನ್.ಡಿ ಜಗನ್ನಾಥ್ ರಾವ್, ಬೆಂಗಳೂರು
5. ಕುಕ್ಕೆಹಳ್ಳಿ, ಗುಂಡುರಾವ್ ಮೆಮೊರೇಬಲ್
6. ಅನುಪಮ ಕೃಷ್ಣಣ್ಣ, ಬೆಂಗಳೂರು
7. ಬಿ. ಸುಭಾಶ್‌ಚಂದ್ರ , ಕಾರ್ಕಳ
8. ವೈ. ಮೋಹನ್ ರಾವ್, ಚಿಟ್ಪಾಡಿ
9. ಕೆ.ಎಸ್. ರಾವ್, ಮುಂಬೈ
10. ಅಶೋಕ ಎಸ್.ಹೆಬ್ಬಾರ್ & ಶ್ರೀಮತಿ ಅನ್ನಪೂರ್ಣೇಶ್ವರಿ, ಹೆಮ್ಮಾಡಿ
11. ಅಸೀವ್ ಹಟ್ಟಂಗಡಿ, ಮುಂಬೈ
12. ಬಿ.ಸುಧಾಕರ್ ರಾವ್, ಬೆಳ್ಳರ್ಪಾಡಿ
13. ಎಮ್. ವೇದಾವತಿ, ಬೆಂಗಳೂರು
14. ಪ್ರೀತಿ, ಮುಂಬೈ
15. ಸನತ್ ರಾಜ್, ಮಂಗಳೂರು
16. ಜೀವನ್ ಪ್ರಕಾಶ್ ಶರ್ಮ, ಬೆಂಗಳೂರು
17. ಪಿ.ವಿಷ್ಣುಮೂರ್ತಿ ರಾವ್ ಮೆಮೊರೇಬಲ್, ಹೆಜಮಾಡಿ
18. ಅಶ್ವಿನ್, ಮಣಿಪಾಲ
19. ಪಡುಬಿದ್ರಿ ಭವಾನಿ ಶಂಕರ್ ರಾವ್, ಮುಂಬೈ
20. ರಾಜೇಶ್ವರಿ ರಾವ್, ಬಂಟಕಲ್ಲು
21. ಎ. ಅರ್ಚನಾ ರಾವ್, ಮುಂಬೈ
22. ಪ್ರೀಯಾಂಕ. ಜೆ. ಜೋಶಿ, ಮುಂಬೈ
23. ವೈ. ವಿಠಲ್ ರಾವ್, ಚಿಟ್ಪಾಡಿ
24. ಪಿ.ಎಸ್. ಪ್ರಭಾಕರ್, ಮಂಗಳೂರು

### ಧನು ಮಾಸದ ವಿಶೇಷ ದಿನಗಳು

| | |
|---|---|
| **16-12-2019** | ಧನು ಸಂಕ್ರಮಣ |
| **18-12-2019** | ಗುರು ಅಸ್ತ, ಗುರು ಮೌಢ್ಯಾರಂಭ |
| **22-12-2019** | ಸರ್ವೈಕಾದಶಿ |
| **26-12-2019** | ಎಳ್ಳಮಾವಾಸ್ಯೆ, ಕಂಕಣ ಸೂರ್ಯಗ್ರಹಣ |
| **27-12-2019** | ಹೇಮಂತ ಋತು, ಪುಷ್ಯ ಮಾಸದ ಶುಕ್ಲಪಕ್ಷಾರಂಭ |
| **01-01-2020** | ಕಿರು ಷಷ್ಠಿ |
| **06-01-2020** | ಸರ್ವೈಕಾದಶಿ, ವೈಕುಂಠ ಏಕಾದಶಿ |
| **09-01-2020** | ಉಡುಪಿ ಶ್ರೀಕೃಷ್ಣನಿಗೆ ಸಪ್ತೋತ್ಸವ ಆರಂಭ |
| **10-01-2020** | ಹುಣ್ಣಿಮೆ, ಗುರು ಉದಯ ಮೌಢ್ಯ ಸಮಾಪ್ತಿ |
| **11-01-2020** | ಹೇಮಂತ ಋತು, ಪುಷ್ಯ ಮಾಸದ ಕೃಷ್ಣಪಕ್ಷಾರಂಭ |
| **13-01-2020** | ಸಂಕಷ್ಟಹರ ಚತುರ್ಥಿ ಚಂದ್ರೋದಯ ರಾತ್ರಿ 9-03ಕ್ಕೆ |
| **14-01-2020** | ಮಕರ ಸಂಕ್ರಮಣ |
| **15-01-2020** | ಉಡುಪಿ ಚೂರ್ಣೋತ್ಸವ ಉತ್ತರಾಯಣ ಪುಣ್ಯಕಾಲ ತರ್ಪಣ |
| **18-01-2020** | ಉಡುಪಿ ಪರ್ಯಾಯ |

॥ ಶ್ರೀ ತ್ರಿಶೂಲಿನೀ ದುರ್ಗಾಪರಮೇಶ್ವರೀ ಪ್ರಸನ್ನಾ ॥

ಪ್ರಿಯ ಭಕ್ತಾಭಿಮಾನಿಗಳೇ,

ಸ್ವಸ್ತಿ ಶ್ರೀ ಶಾಲಿವಾಹನ ಶಕವರ್ಷ 1941 ನೇ ವಿಕಾರಿ ನಾಮ ಸಂವತ್ಸರದ ಮಾರ್ಗಶಿರ ಕೃಷ್ಣ ಅಷ್ಟಮಿ ದಿನಾಂಕ 19.12.2019 ಗುರುವಾರ

### ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ವಾರ್ಷಿಕೋತ್ಸವ

ಸ್ವಸ್ತಿ ಶ್ರೀ ಶಾಲಿವಾಹನ ಶಕವರ್ಷ 1941 ನೇ ಮಾರ್ಗಶಿರ ಕೃಷ್ಣ ದಶಮಿ ತಾ.21-12-2019 ಶನಿವಾರದಿಂದ ದ್ವಾದಶಿ 23-12-2019 ಸೋಮವಾರ ಪರ್ಯಂತ

### ಶ್ರೀ ತ್ರಿಶೂಲಿನೀ ದುರ್ಗಾಪರಮೇಶ್ವರೀ ಅಮ್ಮನವರ ಬ್ರಹ್ಮರಥೋತ್ಸವ

ಕಾರ್ಯಕ್ರಮಗಳು ಶ್ರೀ ಗುರು ದೇವತಾನುಗ್ರಹದಿಂದ ಕ್ಷೇತ್ರ ತಂತ್ರಿಗಳಾದ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಜರಗಲಿರುವುದು. ತಾವೆಲ್ಲರೂ ಈ ಉತ್ಸವಗಳಲ್ಲಿ ಭಾಗವಹಿಸಿ ಶ್ರೀ ದೇವರ ಪ್ರಸಾದ ಸ್ವೀಕರಿಸಿ ಅಮ್ಮನವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುವ

**-ಆಡಳಿತ ಮಂಡಳಿ, ಧಾರ್ಮಿಕ ಉತ್ಸವ ಸಮಿತಿ ಮತ್ತು ಬೈಲುವಾರು ಸಮಿತಿಗಳು**




ಎಮ್. ದೇವಾನಂದ್ ಭಟ್ Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು

Ph : 98459 92859
Ganesh Hebbar & Associates
CHARTERED ACCOUNTANT
S.M.S.P. Complex, Udupi - 576 101.

SAMPATH KUMAR Mobile : 9741508881
TRISHULINI TOURIST
*The Tourist People*
Near Mahishamardhini Temple, Bailur, Udupi.
ALL TYPES OF VEHICLES AVAILABLE FOR HIRE

ಶ್ರೀಮತಿ ಮತ್ತು ಶ್ರೀ ಉದಯಚಂದ್ರ ರಾವ್ ನಂದಳಿಕೆ
ಯೆಲ್ಲೋಸ್ಟೋನ್ ಎಂಟರ್‌ಪ್ರೈಸೆಸ್
ಶಾಂಭವಿ ಹೈಟ್ಸ್, ಸೈಂಟ್‌ಮೇರಿಸ್ ಕಾಲೇಜು ಎದುರು, ಮುಖ್ಯರಸ್ತೆ, ಶಿರ್ವ - 574 116.
ಇ-ಮೇಲ್ : udayarao42@gmail.com
Z Gift Item Z Stationary Z Xerox Z Lamination
Z Spiral Binding Z Mobile & DTC Recharge Z Tours & Travels
Z Courier Service Z Sports Items & Toys Z Ice Creams



## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ಸ್ಕೋಲರ್ಸ್ ಡೇ"



ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ. 17–11–2019ನೇ ರವಿವಾರ 'ಸ್ಕೋಲರ್ಸ್ ಡೇ" ಕಾರ್ಯಕ್ರಮವನ್ನು ನಡೆಸಲಾಯಿತು. ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷ ಕುಮಾರ್ ಕೇದಿಗೆ, ಸಭಾದ ಉಪಾಧ್ಯಕ್ಷ ಮತ್ತು ಅಧ್ಯಕ್ಷರು ವಿದ್ಯಾರ್ಥಿ ವೇತನದ ಸಮಿತಿಯ ಡಾ. ಎ. ಪಿ. ಕೃಷ್ಣ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಜೊತೆಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್. ಹಾಗೂ ಗಣ್ಯರ ಉಪಸ್ಥಿತಿಯಲ್ಲಿ ದೀಪ ಪ್ರಜ್ವಲನೆ ಮಾಡಲಾಯಿತು. ಶ್ರೀಮತಿ ಸುಮನಾ ಕೃಷ್ಣ ಪ್ರಾರ್ಥನೆ ಹಾಡಿದರು. ಡಾ| ಸಂತೋಷ ಪ್ರಭು, ಮನೋರೋಗ ತಜ್ಞರು, ಶ್ರೀ ಐ. ಚಂದ್ರಕಾಂತ ರಾವ್, ಎ. ಬಿ. ಸಿ. ಡಿ. ಟ್ರಸ್ಟ್, ಶ್ರೀ ನಾಗರಾಜ ಶರ್ಮ, ಲೆಕ್ಕ ಪರಿಶೋಧಕರು ವಿವಿಧ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಸ್ಥಾನಿಕ ಬ್ರಾಹ್ಮಣ ಸಮಾಜದ ಸುಮಾರು 175 ವಿದ್ಯಾರ್ಥಿಗಳಿಗೆ ರೂ. 5,89,500/– ಸಾಮಾನ್ಯ ವಿದ್ಯಾರ್ಥಿ ವೇತನ ಮತ್ತು 41 ವಿದ್ಯಾರ್ಥಿಗಳಿಗೆ ರೂ. 48,40,000/– ಸಾಲ ವಿದ್ಯಾರ್ಥಿ ವೇತನ ನೀಡಲಾಯಿತು. ಶ್ರೀ ಸಂಜಯ್ ಕುಮಾರ್ ಪಿ. ಕಾರ್ಯಕ್ರಮ ನಿರ್ವಹಿಸಿದರು. ಹಿರಿಯ ದಾನಿಗಳಾದ ಶ್ರೀ ಕೂಡ್ಲು ವಿಷ್ಣು ಶ್ಯಾನುಭೋಗ್ ವಿದ್ಯಾರ್ಥಿವೇತನ ವಿತರಿಸಿದರು . ಶ್ರೀ ಅನಿಲ್ ನೆಲ್ಲಿಕುಂಜೆ , ಶ್ರೀಮತಿ ಲಲಿತಾ ಜಗನ್ನಾಥ್ ವ್ಯವಸ್ಥೆಗಳಲ್ಲಿ ಸಹಕರಿಸಿದರು.

## ರಂಗಸ್ನೇಹಿ ನಿರ್ದೇಶಕ ಎಲ್ಲೂರು ಗಣೇಶ್ ರಾವ್‌ಗೆ ಸಮ್ಮಾನ



ಶಂಕರಪುರ ಸೈಂಟ್ ಜೋನ್ಸ್ ಇಗರ್ಜಿಯ ಅಧೀನ ಸಂಸ್ಥೆಯಾದ ಕಲಾರಾಧನ್ ಸಾಂಸ್ಕೃತಿಕ ವೇದಿಕೆ ವತಿಯಿಂದ ರಂಗಸ್ನೇಹಿ ಗಣೇಶ್ ರಾವ್ ಎಲ್ಲೂರು ಅವರನ್ನು ಸಮ್ಮಾನಿಸಲಾಯಿತು.

### ಹಾರೈಕೆ

ಹೋಗಿ ಬಾ ಊರಿಗೆ
ಅಬ್ಬಲಿಗೆ ಗೋರಂಟಿಗೆ
ಸಂಪಿಗೆ ಮಲ್ಲಿಗೆ ಅರಳಿದ
ಕರುಳ ಬಳ್ಳಿಯ ತವರಿಗೆ
ಹೋಗಿ ಬಾ...
ಕುಂಟಾಟ ತುಂಟಾಟ
ಎಂಟಾಟ ಉಯ್ಯಾಲೆಯಾಡಿದ
ಬಾಲ್ಯದಾಟದ ಅಂಗಳಕೆ
ಹೋಗಿ ಬಾ...
ಗುಬ್ಬಿಗಳು ಕಾಗೆಗಳು
ಕೋಳಿ ಕೋಗಿಲೆಗಳು ನಲಿದಾಡುವ
ನವಿಲುಗಳ ನಾಡಿಗೆ
ಹೋಗಿ ಬಾ...
ಅಕ್ಕ ತಂಗಿಯರ
ಅತ್ತೆ ಮಾವಂದಿರ ಬಂಧು ಬಾಂಧವರ
ಕೊಂಡಾಟದ ಅರಮನೆಗೆ
ಹೋಗಿ ಬಾ...
ಅಮ್ಮನ ಅಕ್ಕರೆಯ
ಅಣ್ಣ ತಮ್ಮಂದಿರ ವಾತ್ಸಲ್ಯದ
ಮಮತೆಯ ಮಡಿಲಿಗೆ
ಹೋಗಿ ಬಾ...
ನೆರೆ ಹೊರೆಯವರ
ಹಿರಿಕಿರಿಯ ಬಂಧುಗಳು ಹರಸಿದ
ಕುಲದೇವರ ಗುಡಿಗೆ
ಹೋಗಿ ಬಾ...
ಹೋಗಿ ಬಾ ಮರೆಯದ ತವರಿಗೆ
ಮನೆಯಂಗಳದ ಪಾರಿಜಾತದ ಹೂವೊಂದು
ಬಾಡಿ ಬಿದ್ದಿದೆ ಧರೆಗೆ!



ಶಾಂತಾ ಪುತ್ತೂರು

## ಶಂಕರಪುರ ಮಲ್ಲಿಗೆ, ಮಟ್ಟುಗುಳ್ಳ ಮತ್ತು ಕಪ್ಪೆ ಪ್ರಭೇದ ವಿಶೇಷ ಅಂಚೆ ಲಕೋಟೆಗಳು



ಶಂಕರಪುರ ಮಲ್ಲಿಗೆ, ಉಡುಪಿ ಮಲ್ಲಿಗೆಯಲ್ಲಿ ಬಹಳ ಪ್ರಸಿದ್ಧವಾದುದು. ಉಡುಪಿ ಜಿಲ್ಲೆಯಲ್ಲಿರುವ 'ಶಂಕರಪುರ' ಎಂಬ ಸಣ್ಣ ಊರಿನಲ್ಲಿ ಈ ಮಲ್ಲಿಗೆಯನ್ನು ಬೆಳೆಸುತ್ತಾರೆ. ನೂರು ವರ್ಷಗಳ ಹಿಂದೆ ಈ ಮಲ್ಲಿಗೆ ಕೃಷಿ ಪ್ರಾರಂಭವಾಯಿತು. ಇದನ್ನು ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಉಪಯೋಗಿಸುತ್ತಾರೆ. ಈ ಹೂವಿಗೆ ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಸಿಕ್ಕಿದೆ. ಗಲ್ಫ್ ಮತ್ತು ಇನ್ನಿತರ ರಾಷ್ಟ್ರಗಳಿಗೆ ಮುಂಬಯಿ ಮೂಲಕ ರಫ್ತಾಗುತ್ತದೆ.

ಮಟ್ಟುಗುಳ್ಳ ಉಡುಪಿ ಜಿಲ್ಲೆಯ 'ಮಟ್ಟು' ಎಂಬ ಸ್ಥಳದಲ್ಲಿ ಬೆಳೆಯುತ್ತದೆ. ಉಡುಪಿಯ ಪರ್ಯಾಯ ಕಾಲದಲ್ಲಿ ಮಟ್ಟುಗುಳ್ಳದ ಸಾಂಬಾರು ಬಹಳ ವಿಶೇಷವಾಗಿದೆ. ಮಟ್ಟುಗುಳ್ಳದ ಇನ್ನೊಂದು ಹೆಸರು ಬದನೆ. ಮಟ್ಟುವಿನಲ್ಲಿ ಬೆಳೆದ ಬದನೆಕಾಯಿಯನ್ನು ತಂದು ಉಡುಪಿ ಶ್ರೀಕೃಷ್ಣನಿಗೆ ನೈವೇದ್ಯ ರೂಪದಲ್ಲಿ ಅರ್ಪಿಸುತ್ತಾರೆ. ಇದರಿಂದಾಗಿ ಈ ಮಟ್ಟುಗುಳ್ಳಕ್ಕೆ ಧಾರ್ಮಿಕ ಪ್ರಾಮುಖ್ಯತೆ ದೊರೆತಿದೆ. ಮಟ್ಟುಗುಳ್ಳವನ್ನು ಸೇವಿಸಿದರೆ ನಂಜು ಆಗುವುದಿಲ್ಲ. ಇದು ಸಹಾ ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದಿದೆ.

ಅಂಚೆ ಇಲಾಖೆಯವರು ಪರಿಸರ ದಿನಾಚರಣೆಯನ್ನು ಅರ್ಥಪೂರ್ಣ ಗೊಳಿಸುವುದಕ್ಕಾಗಿ ಕರಾವಳಿಯ ಅನನ್ಯತೆಗಳಾದ ಮಟ್ಟುಗುಳ್ಳ, ಶಂಕರಪುರ ಮಲ್ಲಿಗೆ ಮತ್ತು ಕಪ್ಪೆಯ ಪ್ರಭೇದ (ಯಪ್ಲಿಕ್ಟಿನ್ ಅಲೋಪಿ) ಇವುಗಳ ವಿಶೇಷ ಅಂಚೆ ಲಕೋಟೆಗಳನ್ನು 13–10–2019 ರಂದು ಮಂಗಳೂರಿನಲ್ಲಿರುವ ಹಾಲಿನಲ್ಲಿ ಜರಗಿದ ರಾಜ್ಯ ಮಟ್ಟದ ಅಂಚೆ ಚೀಟಿ ಪ್ರದರ್ಶನ) ಕರ್ನಾಪೆಕ್ಸ್–2019) ದಲ್ಲಿ ಬಿಡುಗಡೆ ಮಾಡಲಾಯಿತು. ಮೇಲೆ ಹೇಳಿದ ಕಪ್ಪೆಯ ಪ್ರಭೇದವನ್ನು ಕಂಡುಹಿಡಿದವರು ನಮ್ಮವರೇ ಆದ ಮಂಗಳೂರಿನ ನಿವೃತ್ತ ಪ್ರೊ. ಡಾ. ಹರೀಶ್ ಜೋಶಿಯವರು. ಈ ಮೂರು ವಿಶೇಷ ಅಂಚೆಲಕೋಟೆಗಳ ವಿನ್ಯಾಸವನ್ನು ರಚಿಸಿದವರು ಎಂ.ಕೆ.ಕೃಷ್ಣಯ್ಯನವರು.

## ಬೆನ್ನುಮೂಳೆ ಚಿಕಿತ್ಸೆಗೆ ನೂತನ ತಂತ್ರಜ್ಞಾನ



ಬೆನ್ನುಮೂಳೆಯ ಮುಖ್ಯವಾಗಿ ಗೂನುಬೆನ್ನಿನ ಚಿಕಿತ್ಸೆಗೆ 3–ಡಿ ಚಿತ್ರಣ ಒದಗಿಸಿ ಶಸ್ತ್ರಚಿಕಿತ್ಸೆಗೆ ನೆರವಾಗುವ ನೂತನ ತಂತಜ್ಞಾನವನ್ನು ಕುಮುದ ಹೆಲ್ತ್‌ಟೆಕ್‌ನ ಡಾ| ಸಂಪತ್ ಕುಮಾರ್ ಅವರ ತಂಡವು ಅಭಿವೃದ್ಧಿ ಪಡಿಸಿದ್ದು ಅದನ್ನು ಇತ್ತೀಚೆಗೆ ಮಣಿಪಾಲದಲ್ಲಿ ಬಿಡುಗಡೆಗೊಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮಣಿಪಾಲ ಯೂನಿವರ್ಸಿಟಿಯ ಕುಲಾಧಿಪತಿ ಶ್ರೀ ಹೆಚ್.ಎಸ್.ಬಲ್ಲಾಳ್ ಮಣಿಪಾಲ ಆಸ್ಪತ್ರೆಯ ಡೀನ್ ಡಾ| ಶರತ್ ಉಪಸ್ಥಿತರಿದ್ದರು ಈ ತಂತ್ರಜ್ಞಾನದಿಂದ ಎಂ.ಆರ್.ಐ. ಸ್ಕ್ಯಾನ್‌ನಿಂದ ಪಡೆಬೇಕಾಗಿದ್ದ ಮಾಹಿತಿಯನ್ನು ಅದರ ಹತ್ತನೇ ಒಂದು ಭಾಗ ವೆಚ್ಚದಲ್ಲಿ ಪಡೆಯಬಹುದು




RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)


*With Best Complimemts From*
SRI M. SHAILESH RAO
B.E., Civil
Ph : 9448624324
Civil Engineer & Contractor
SRI MALAVIKA ASSOCIATES
KALSANKA-UDUPI ROAD, UDUPI.
Website : shreemaalavikaassociates.com

ಶುಭಾಶಯಗಳೊಂದಿಗೆ
ಹೆಬ್ಬಾರ್ ಎಂಟರ್‌ಪ್ರೈಸಸ್
ವೈಷ್ಣವಿ ಬಿಲ್ಡಿಂಗ್, ವಾದಿರಾಜ ರಸ್ತೆ, ಉಡುಪಿ–576101.
ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಶಾಮಿಯಾನ, ಕುರ್ಚಿ, ಟೇಬಲ್, ಪಾತ್ರೆ, ಅಡುಗೆ ಹಾಗೂ ಕ್ಯಾಟರಿಂಗ್ ವ್ಯವಸ್ಥೆ ಲಭ್ಯವಿದೆ.
ಪ್ರೊ : ಮಂಜುನಾಥ ಹೆಬ್ಬಾರ್ ಸಂಪರ್ಕ ಸಂಖ್ಯೆ 9611099894



## ಕವನಸಂಕಲನ ಬಿಡುಗಡೆ

ಕವಯತ್ರಿ ಸಪ್ನಾ ದಿನಕರ್ ಅವರು ರಚಿಸಿರುವ ಹನಿಗವನಗಳ ಸಂಕಲನ ತುಂತುರು ಹನಿಗಳು ತಾ08-12-2019 ರಂದು ಉಪ್ಪಿನಂಗಡಿಯಲ್ಲಿ ಅಮೃತ ಪ್ರಕಾಶನದ 19ನೆಯ ಸರಣಿ ಕಾರ್ಯಕ್ರಮದ ಅಂಗವಾಗಿ ಬಿಡುಗಡೆಯಾಯಿತು ಕಾಸರಗೋಡಿನ ಖ್ಯಾತ ಕವಿ ಡಾ। ಅಶೋಕ್ ಕುಮಾರ್, ಉದ್ಯಮಿ ಶ್ರೀ ಎ ಜನಾರ್ದನ ರಾವ್, ಡಾ। ಮಾಲತಿ ಶೆಟ್ಟಿ ಮಾಣೂರು ಉಪಸ್ಥಿತರಿದ್ದರು



## "ಮೌನ ಮಾತು" ಕವನ ಸಂಕಲನ ಬಿಡುಗಡೆ

ಪುತ್ತೂರು ವಿವೇಕಾನಂದ ಕಾಲೇಜಿನ ಕನ್ನಡ ಉಪನ್ಯಾಸಕಿ ಶ್ರೀಮತಿ ಡಾ.ಗೀತಾ ರಾವ್. ಟಿ ಇವರ ಕವನಸಂಕಲ "ಮೌನ ಮಾತು" ಇತ್ತೀಚೆಗೆ ಬಿಡುಗಡೆಗೊಂಡಿತು. ಅವರು ತಂತ್ರಾಡಿ ಪ್ರಭಾಕರ ಶ್ಯಾನುಭಾಗ್‌ರವರ ಪುತ್ರಿ

## ಗುರುವಂದನಾ ಕಾರ್ಯಕ್ರಮ



ಶ್ರೀ. ಧರ್ಮಸ್ಥಳ ಮಂಜುನಾಥೇಶ್ವರ ಪ್ರೌಢಶಾಲೆಯ 1968-69 ಸಾಲಿನ ಪ್ರಥಮ ತಂಡದ ವಿದ್ಯಾರ್ಥಿಗಳು ಸುವರ್ಣ ಮಹೋತ್ಸವವನ್ನು 12.11.2019 ರಂದು ಧರ್ಮಸ್ಥಳದಲ್ಲಿ ವಿಜೃಂಭಣೆಯಿಂದ ಆಚರಿಸಿದರು. ಶ್ರೀಮತಿ ಅರುಂಧತಿ ರಾವ್ ರವರು 1968-70 ರಲ್ಲಿ ಆ ಶಾಲೆಯಲ್ಲಿ ವಿಜ್ಞಾನ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದರು. ಈ ಸಮಾರಂಭದ ಗುರುವಂದನಾ ಕಾರ್ಯಕ್ರಮದಲ್ಲಿ ಅವರನ್ನು ಪದ್ಮವಿಭೂಷಣ ಡಾ. ವೀರೇಂದ್ರ ಹೆಗ್ಗಡೆಯವರು ಸನ್ಮಾನಿಸಿದರು. ಶ್ರೀಮತಿ ಅರುಂಧತಿ ರಾವ್‌ರವರು ಬೆಂಗಳೂರಿನಲ್ಲಿರುವ ಬೈಲಕರೆ ಗೋವಿಂದ ರಾವ್‌ರವರ ಪತ್ನಿ ಹಾಗೂ ಉಜಿರೆಯಲ್ಲಿದ್ದ ದಿ। ಮಾರ್ಪಳ್ಳಿ ಸುಬ್ರಾಯರ ಸುಪುತ್ರಿ.



## ಚುನಾವಣೆಯಲ್ಲಿ ಆಯ್ಕೆ

ಸುಮಂಗಲ ಕೇದಗೆಯವರು ಇತ್ತೀಚಿಗೆ ನಡೆದ ಮಂಗಳೂರು ಪಾಲಿಕೆಯ ಚುನಾವಣೆಯಲ್ಲಿ ಕುಂಜತ್ತಬೈಲ್ ವಾರ್ಡ್‌ನಿಂದ ಭಾರತೀಯ ಜನತಾಪಕ್ಷದ ಅಭ್ಯರ್ಥಿಯಾಗಿ ಜಯಗಳಿಸಿ ಆಯ್ಕೆಯಾದರು.

## ಯಾಜ್ಞವಲ್ಕ್ಯ ಹೆಬ್ಬಾರ್‌ಗೆ ಪ್ರತಿಭಾ ಪುರಸ್ಕಾರ



ಉಡುಪಿ ತಾಲೂಕು ಬ್ರಾಹ್ಮಣ ಪರಿಷತ್ತಿನ ವತಿಯಿಂದ ಉಡುಪಿ ವಲಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ಶ್ರೀ ಯಾಜ್ಞವಲ್ಕ್ಯ ಹೆಬ್ಬಾರ್, ಲೆಕ್ಕಪರಿಶೋಧಕ ಶ್ರೀ ಗಣೇಶ ಹೆಬ್ಬಾರ್ ಹಾಗೂ ಶ್ರೀ ಆರತಿ ಹೆಬ್ಬಾರ್ ಇವರ ಪುತ್ರ ಇವರನ್ನು ಪುರಸ್ಕರಿಸಲಾಯಿತು.

## ಜಯರಾಮ ರಾಯರಿಗೆ ಸನ್ಮಾನ



ಮೂಡುಬಿದ್ರಿ ಬೊಕ್ಕಸ ಮನೆತನದ ಶ್ರೀ ಜಯರಾಮ ರಾವ್ ಹಾಗೂ ಶ್ರೀಮತಿ ಜ್ಯೋತಿ ದಂಪತಿಗಳನ್ನು ಅವರ 60ರ ಸಂಭ್ರಮದಲ್ಲಿ ಮೂಡಬಿದ್ರಿ ಸಂಘದ ವತಿಯಿಂದ ಅರಸಿನ ಕುಂಕುಮ ಉಡುಗೊರೆಯಿತ್ತು ಸನ್ಮಾನಿಸಲಾಯಿತು.

## ಶ್ರೀಮತಿ ಚಂಪಾ ರಾಮಚಂದ್ರ ರಾವ್‌ರವರಿಗೆ ಕನಕಾಭಿಷೇಕ



ಬಳ್ಕುಂಜೆಯ ಶ್ರೀಮತಿ ಚಂಪಾ ರಾಮಚಂದ್ರ ರಾವ್. ಮೂಲತಃ ಬೋಳ ಕುಟುಂಬದವರಾದರೂ, ಇವರು ಮರೋಳಿ ಮನೆತನದಲ್ಲಿ ಗುರುತಿಸಿಕೊಂಡ ನಾರಾಯಣರಾಯರು ಮತ್ತು ಕಮಲ ದಂಪತಿಗಳ ಎರಡನೇ ಮಗಳು. ಇವರ ಪತಿ ದಿ.ಕುಂಜೂರು ರಾಮಚಂದ್ರರಾಯರು ಮಂಗಳೂರು ತಾಲ್ಲೂಕಿನ ಕಿನ್ನಿಗೋಳಿ ಸಮೀಪದ ಬಳ್ಕುಂಜೆಯಲ್ಲಿ ವಾಸವಾಗಿದ್ದರು. ವಿವಾಹದ ನಂತರ ದೂರದ ಅಪರಿಚಿತ ಹಳ್ಳಿಗೆ ಬಂದ ಚಂಪಾರವರು ಸುಮಾರು 41 ವರ್ಷ ಒಂದೇ ಶಾಲೆಯಲ್ಲಿ ಶಿಕ್ಷಕಿಯಾಗಿ ಶಾಲಾ ಮಕ್ಕಳನ್ನು ತನ್ನ ಮಕ್ಕಳಂತೆಯೇ ನೋಡಿಕೊಂಡವರು. ಇವರಿಗೆ ತಾ.20-10-2019ರಂದು ಅವರ ಸ್ವಗೃಹ "ಸಾಧನಾ"ದಲ್ಲಿ 90ನೇ ವರ್ಷದ ಪ್ರಯುಕ್ತ 'ಸೌರೀ ಶಾಂತಿ' ನೆರವೇರಿಸಿ ಕನಕಾಭಿಷೇಕವನ್ನು ನೆರವೇರಿಸಲಾಯಿತು.

## ದೇವಾನಂದ ಭಟ್ಟರ ಆಸ್ಟ್ರೇಲಿಯಾ ಯಕ್ಷ ಪ್ರವಾಸ



ಮೂಡಬಿದ್ರಿ ಬೆಳುವಾಯಿಯ ಶ್ರೀಯಕ್ಷದೇವ ಮಿತ್ರಕಲಾ ಮಂಡಳಿಯ ವತಿಯಿಂದ ಅಕ್ಟೋಬರ್ ತಿಂಗಳಿನಲ್ಲಿ ಪ್ರಥಮ ಬಾರಿಗೆ ಆಸ್ಟೇಲಿಯಾ ಖಂಡದ ವಿವಿಧ ನಗರಗಳಲ್ಲಿ ಯಕ್ಷಗಾನ ಪ್ರದರ್ಶನವನ್ನು ಏರ್ಪಡಿಸಿ ಮಂಡಳಿಯ ಸ್ಥಾಪಕ ಅಧ್ಯಕ್ಷ ಎಂ. ದೇವಾನಂದ ಭಟ್ ಇವರು ಅಪಾರ ಅಭಿಮಾನಿಗಳಿಂದ ಪುರಸ್ಕೃತಗೊಂಡರು

## ಬೈಲೂರು ಬಾಲಚಂದ್ರರಾಯರಿಗೆ 75ರ ಅಭಿನಂದನೆ



ನಮ್ಮ ಸಮಾಜದ ಖ್ಯಾತ ಸಾಹಿತಿ, ರಂಗಕರ್ಮಿ, ಮುಂಬಯಿ ಸಂಘದ ಸಂಘಟಕ, ಬೈಲೂರು ಬಾಲಚಂದ್ರ ರಾಯರಿಗೆ 75 ವರ್ಷದ ಪ್ರಯುಕ್ತ ಅದ್ದೂರಿ ಸಮಾರಂಭದಲ್ಲಿ ಅಭಿನಂದಿಸಲಾಯಿತು.

## ನಿಧನ



ಶ್ರೀಮತಿ ಬಪ್ಪನಾಡು ಪ್ರಭಾವತಿ ರಾವ್ ಇವರು ತಾ.14-11-2019ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು.



ದೊಡ್ಡಣಗುಡ್ಡೆ ನಿವಾಸಿ ಶ್ರೀಮತಿ ಮಾಂಟ್ರಾಡಿ ಜಾನಕಿ ಶಶಿಕಾಂತರಾವ್ ತಾ26-11-2019ರಂದು ನಿಧನ ಹೊಂದಿದರು

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಬಳಸಿದ ಕಾರುಗಳ ಮಾರಾಟ ಮತ್ತು ಖರೀದಿಗಾಗಿ ನಮ್ಮನ್ನು ಸಂಪರ್ಕಿಸಿ :
ಸೂಕ್ತ ಬೆಲೆಯೊಂದಿಗೆ ಉತ್ತಮ ಸೇವೆ ಲಭ್ಯ.
**N. Laxmi Prasad**
ಕಾರ್ಯಕಾರಿಣಿ ಮಂಡಳಿ ಸದಸ್ಯರು
D. K. District Used Vehicle Dealers & Agents Association (R.), Mangalore
Flat No. 103, Deepa Residency, Near Preethi Apartment
Kodiyalguttu West, Kodiyalbail, MANGALORE - 575 003
Mob. : 9845644489, 9964236997 E-mail : laxmiprasad5010@gmail.com

# ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಮಹಿಳಾ ಸಮಾವೇಶ



ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣರ ಸಂಘ (ರಿ.) ಇವರ ರಜತ ಮಹೋತ್ಸವದ ಪ್ರಯುಕ್ತ ಮಹಿಳಾ ಸಮಾವೇಶ ಮತ್ತು ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮ ತಾ 17-11-2019 ನೇ ಭಾನುವಾರ ಶ್ರೀ ದಯಾನಂದ ರಾವ್ ಮತ್ತು ಶ್ರೀಮತಿ ಸವಿತಾ ಡಿ. ರಾವ್ ಇವರ ಆತಿಥ್ಯದಲ್ಲಿ ಶಂಕರನಾರಾಯಣದಲ್ಲಿ ವಿಜೃಂಭಣೆಯಿಂದ ಜರುಗಿತು.

ಬೆಳಿಗ್ಗೆ ಗಂಟೆ 9.30 ಕ್ಕೆ ಉದ್ಘಾಟನೆಯ ಸಮಾರಂಭವು ಶ್ರೀಮತಿ ಸರೋಜ ಮರವಂತೆ (ಅಧ್ಯಕ್ಷರು ಮಹಿಳಾ ವೇದಿಕೆ) ಇವರ ಸಮ್ಮುಖದಲ್ಲಿ ಜರುಗಿತು. ಶ್ರೀಮತಿ ಸರೋಜಿನಿ ವಿ. ರಾವ್. ಅಂಬಾ ಪ್ರಸಾದ, ಶಂಕರನಾರಾಯಣ ಇವರು ದೀಪ ಪ್ರಜ್ವಲನೆ ಮಾಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಶಾಂತಾ ಗಣೇಶ (ಉಡುಪಿ ಜಿಲ್ಲಾ ಬ್ರಾಹ್ಮಣ ಮಹಾಸಭಾ, ಮಹಿಳಾವೇದಿಕೆ, ಅಧ್ಯಕ್ಷರು) ಇವರು ಭಾಗವಹಿಸಿದ್ದರು.

ಗಂಟೆ 10.00 ರಿಂದ ಸಮಾಜದ ಮಹಿಳಾ ಸದಸ್ಯರಿಂದ ಸಾಂಸ್ಕೃತಿಕ ಮತ್ತು ಮನೋರಂಜನಾ ಕಾರ್ಯಕ್ರಮ ಪ್ರಾರಂಭವಾಗಿ ಮಹಿಳಾ ಸದಸ್ಯರು ಭಜನಾ ಮತ್ತು ದಾಂಡಿಯಾ ನೃತ್ಯ, ಯಕ್ಷ ನೃತ್ಯ, ಕನ್ನಡ ಸಂಸ್ಕೃತಿ ಸಾರುವ "ಹಚ್ಚೇವು ಕನ್ನಡದ ದೀಪ" ನೃತ್ಯಗಳು ಹಿಂದಿ ಮತ್ತು ಕನ್ನಡ ಚಲನಚಿತ್ರಗಳನ್ನು ಆಧರಿಸಿದ ನೃತ್ಯಗಳು ಕೊನೆಯದಾಗಿ ಸಾಂಪ್ರದಾಯಿಕ ಉಡುಗೆಯಲ್ಲಿ "ಫ್ಯಾಶನ್ ಶೋ" ಕಾರ್ಯಕ್ರಮಗಳನ್ನು ಅತ್ಯಂತ ಸುಂದರವಾಗಿ ನಡೆಸಿಕೊಟ್ಟರು. ಮೇಲಿನ ಕಾರ್ಯಕ್ರಮಗಳಲ್ಲಿ 3 ವರ್ಷದ ಬಾಲಕಿಯರಿಂದ 50 ವರ್ಷದ ಮಹಿಳೆಯರು ಭಾಗವಹಿಸಿದ್ದು ವಿಶೇಷವಾಗಿತ್ತು. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಎಲ್ಲರಿಗೂ ಶ್ರೀಮತಿ ಪುಷ್ಪಲತಾ ಉಮೇಶ ಶಾನುಭಾಗ್ ಮತ್ತು ಶ್ರೀ ಉಮೇಶ ಶಾನುಭಾಗ್, ಕಿರಿಮಂಜೇಶ್ವರ ಇವರು ಸ್ಮರಣಿಕೆಗಳನ್ನು ಪ್ರಾಯೋಜಿಸಿ ವಿತರಿಸಿದರು.

ಮಧ್ಯಾಹ್ನ ಗಂಟೆ 12.15ಕ್ಕೆ ಸಭಾ ಕಾರ್ಯಕ್ರಮವು ಶ್ರೀ ಜೆ. ಕೃಷ್ಣಗೋಪಾಲ್ ಹೆಬ್ಬಾರ್‌ರವರ (ಸಂಘದ ಅಧ್ಯಕ್ಷರು) ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ದಯಾನಂದ ರಾವ್, ಶಂಕರನಾರಾಯಣ ಇವರು ಸ್ವಾಗತ ಮತ್ತು ಅತಿಥಿಗಳ ಪರಿಚಯ ಮಾಡಿಸಿದರು. ಶ್ರೀ ಜಗದೀಶ ರಾವ್ ಹೊಸಕೋಟೆ (ಸಂಘದ ಕಾರ್ಯದರ್ಶಿ) ಇವರು ಈ ವರ್ಷದ ಸಂಘದ ರಜತ ಮಹೋತ್ಸವದ ಆಚರಣೆಯ ಕುರಿತು ಸಂಪೂರ್ಣ ಮಾಹಿತಿ ನೀಡಿ ಇದಕ್ಕೆ ಸಂಘದ ಸದಸ್ಯರ ಸಹಕಾರ ಕೋರಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಭಾರತಿ ಉದಯ ಹೆಬ್ಬಾರ್ (ಬೆಂಗಳೂರು), ಶ್ರೀಮತಿ ರಜನಿ ಮಂಜುನಾಥ ಹೆಬ್ಬಾರ್ (ನಗರಸಭಾ ಸದಸ್ಯರು ಉಡುಪಿ), ಶ್ರೀಮತಿ ದಿವ್ಯಶ್ರೀ (ಚಲನಚಿತ್ರ ನಟಿ) ಹೈದರಾಬಾದ್, ಇವರುಗಳು ಭಾಗವಹಿಸಿದ್ದರು. ಶ್ರೀಮತಿ ದಿವ್ಯಶ್ರೀ ಅವರು ತಮ್ಮ ಭಾಷಣದಲ್ಲಿ ಸಮಾಜದಲ್ಲಿ ಮಹಿಳೆಯರ ಪಾತ್ರ, ಅದಕ್ಕೆ ಪುರುಷರ ಸ್ಪಂದನೆ ಇತ್ಯಾದಿ ವಿಷಯಗಳನ್ನು ಮನಮುಟ್ಟುವಂತೆ ವಿವರಿಸಿದರು. ಶ್ರೀ ಉಮೇಶ ಶಾನುಭಾಗ್ (ಸಂಘದ ಗೌರವಾಧ್ಯಕ್ಷರು ಬೆಳ್ಳಿ ಹಬ್ಬ ಸಮಿತಿ), ಶ್ರೀ ಗೋಪಾಲ್‌ಕೃಷ್ಣ ಹೆಬ್ಬಾರ್ (ಸಂಘದ ನಿಕಟಪೂರ್ವ ಅಧ್ಯಕ್ಷರು), ಹೆಚ್. ಹಿರಿಯಣ್ಣ ರಾವ್ (ಸಂಘದ ಸ್ಥಾಪಕ ಅಧ್ಯಕ್ಷರು), ಶ್ರೀಮತಿ ಪುಷ್ಪಲತಾ ಶಾನುಭಾಗ್ (ಸಂಘದ ಗೌರವಾಧ್ಯಕ್ಷರು ಮಹಿಳಾ ವೇದಿಕೆ), ಶ್ರೀಮತಿ ಸರೋಜ ಮರವಂತೆ (ಸಂಘದ ಅಧ್ಯಕ್ಷರು ಮಹಿಳಾ ವೇದಿಕೆ), ಇವರುಗಳು ಸಭೆಯಲ್ಲಿ ಉಪಸ್ಥಿತರಿದ್ದು ಸಮಯೋಚಿತವಾಗಿ ಮಾತನಾಡಿದರು.

ಸಮಾರಂಭದ ಸಂಪೂರ್ಣ ಆತಿಥ್ಯವನ್ನು ವಹಿಸಿದ ಶ್ರೀ ದಯಾನಂದ ರಾವ್ ಮತ್ತು ಸವಿತಾ ಡಿ. ರಾವ್ ದಂಪತಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಸಂಘದ ವತಿಯಿಂದ ಗೌರವಿಸಲಾಯಿತು. ಸಮಾಜದ ಗಣ್ಯರಾದ ಶ್ರೀ. ಉದಯ ಹೆಬ್ಬಾರ್, ಶ್ರೀ. ಮಂಜುನಾಥ ಹೆಬ್ಬಾರ್, ಶ್ರೀ ಗಣೇಶ ರಾವ್ ಕುಂಭಾಶಿ, ಶ್ರೀ ಭಾಸ್ಕರ ರಾವ್ ಹೊಸಕೋಟೆ, ಶ್ರೀ. ಪಿ. ಶೇಷಪ್ಪಯ್ಯ ಬೈಂದೂರು ಮೊದಲಾದವರು ಭಾಗವಹಿಸಿ ದ್ದರು. ಶ್ರೀ ಸತ್ಯನಾರಾಯಣ ಹೆಬ್ಬಾರ್‌ರವರ (ಸಂಘದ ಕೋಶಾಧಿಕಾರಿಗಳು) ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

**ಸಂಪಾದಕ ಮಂಡಳಿ**

ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ಸುರೇಶ್ ಶ್ಯಾನುಭಾಗ್, ಇಂದ್ರಾಳಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ಪ್ರಭಾಕರ ಭಂಡಿ, ಪೆರ್ಡೂರು
ಶ್ರೀ ವೈ. ಭುವನೇಂದ್ರ ರಾವ್, ಕೊರಂಗ್ರಪಾಡಿ

**ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)**

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

ನಿಮ್ಮ ಕನಸಿನ ಮನೆ ಸಾಕಾರಗೊಳಿಸಿ "ಗೃಹ ಸಾಲ" ಸಂಘದ ಪ್ರಾಥಮಿಕ ಸದಸ್ಯರಿಗೆ 11.50% (ಷರತ್ತುಗಳು ಅನ್ವಯ)

| | |
|---|---|
| ವಾಹನ ಸಾಲ | 12.5% |
| ಹಳೆಯ ವಾಹನ | 14% |
| ಆಭರಣ ಸಾಲ | 12.5% |
| ವೈಯಕ್ತಿಕ ಸಾಲ | 16% |
| ಶಿಕ್ಷಣ ಸಾಲ | 12% |
| ಅಡಮಾನ ಸಾಲ | 13% |

**ಠೇವಣಿಗಳ ಬಡ್ಡಿದರ**

| | | | |
|---|---|---|---|
| ಉಳಿತಾಯ ಖಾತೆ | 5% | ನಿತ್ಯನಿಧಿ ಠೇವಣಿ | 5% |
| 46 ದಿನಗಳಿಂದ 364 ದಿನಗಳು | 6%, | 1 ವರ್ಷ ಮತ್ತು ಹೆಚ್ಚಿನ ಅವಧಿಗೆ | 9% |

(ಹಿರಿಯ ನಾಗರಿಕರಿಗೆ/ಸಂಘ ಸಂಸ್ಥೆಗಳಿಗೆ 1 ವರ್ಷಕ್ಕಿಂತ ಹೆಚ್ಚಿನ ಅವಧಿಯ ಠೇವಣಿಗಳಿಗೆ 0.5% ಹೆಚ್ಚಿಗೆ ನೀಡಲಾಗುವುದು)

2011-12ರಿಂದ 2016-17ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದಿರುವ ಸದಸ್ಯರು ಸಂಘದ ವ್ಯವಹಾರದ ಸಮಯದಲ್ಲಿ ಬಂದು ಪಡೆದುಕೊಳ್ಳಬಹುದು. ಅಥವಾ ತಮ್ಮ ಹೆಸರಿನಲ್ಲಿ ಉಳಿತಾಯ ಖಾತೆಯನ್ನು ತೆರೆದಲ್ಲಿ ಪ್ರತಿ ವರ್ಷದ ಲಾಭಾಂಶವನ್ನು ಉಳಿತಾಯ ಖಾತೆಗೆ ಜಮೆ ಮಾಡಲಾಗುವುದು.

ನಿಮ್ಮ ಹತ್ತಿರದ ಶಾಖೆಯನ್ನು ಇಂದೇ ಸಂಪರ್ಕಿಸಿರಿ

ಪ್ರಧಾನ ಕಛೇರಿ (☎ 2522408) ಕುಕ್ಕಿಕಟ್ಟೆ ಶಾಖೆ (☎ 2592133) ಪಡುಬಿದ್ರಿ ಶಾಖೆ (☎ 2556608) ಕೋಟೇಶ್ವರ ಶಾಖೆ (☎ 9341854114)



ತಂತ್ರಾಡಿ ವಿಶ್ವನಾಥ ಶಾನುಭೋಗ್ ☎ 94487 24161 97417 85551

**ಹರಿಕೃಷ್ಣ ಡಿಜಿಟಲ್ಸ್**

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು ಉಡುಪಿ - 576102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




**With Best Compliments From :**




9845084866, 9880742159, 9886199769
1st Floor, New Milagres Mansion, Falnir Road, Mangalore - 575001
info@landtrades.in
sales@landtrades.in
Ph: 0824 2425424
www.landtrades.in
CRISIL DA3+

## ಎರ್ಮಾಳು ವಾಸುದೇವರಾವ್‌ರಿಗೆ ಸೌರಿಶಾಂತಿ-ಸನ್ಮಾನ



ನಮ್ಮ ಸಮಾಜದ ಹಿರಿಯರೂ, ನಿವೃತ್ತ ಶಿಕ್ಷಕರೂ, ಯಕ್ಷಗಾನ ಗುರುಗಳೂ ಆಗಿರುವ ಶ್ರೀ ಎರ್ಮಾಳು ವಾಸುದೇವ ರಾವ್‌ರವರು ಮಕ್ಕಳು ಕುಟುಂಬಿಕರೊಂದಿಗೆ 30.11.2019ರ ಶನಿವಾರದಂದು ಅದಮಾರಿನ ತಮ್ಮ ಮನೆಯಲ್ಲಿ 90ನೇ ವರ್ಷದ "ಸೌರಿಶಾಂತಿ" ಕಾರ್ಯಕ್ರಮವನ್ನು ನಡೆಸಿದರು. ಆ ದಿನ ಬೆಳಿಗ್ಗೆಯಿಂದ ಕೆ.ದೇವರಾಜ ಹೆಬ್ಬಾರ್‌ರ ನೇತೃತ್ವದಲ್ಲಿ ಶಾಂತಿಹೋಮ ಜರಗಿತು. ನಂತರ ಸಮೀಪದ ಸರ್ವೋದಯ ಸಭಾಭವನದಲ್ಲಿ ಸರಯೂ ಮಹಿಳಾ ಯಕ್ಷಗಾನ ಕಲಾವಿದರಿಂದ "ರತಿ ಕಲ್ಯಾಣ" ಎಂಬ ತಾಳ ಮದ್ದಳೆ ಜರಗಿತು. ಆ ಸಂದರ್ಭದಲ್ಲಿ ವಾಸುದೇವರಾಯರ ಅಭಿಮಾನಿಗಳಿಂದ ಶ್ರೀಯುತರಿಗೆ ಅಭಿನಂದನಾ ಕಾರ್ಯಕ್ರಮ ಜರಗಿತು. ಯಕ್ಷಗಾನ ಕಲಾವಿದರೂ, ವಿಮರ್ಶಕರೂ ಆದ ಕೆ.ಎಲ್.ಕುಂಡಂತಾಯ ಹಾಗೂ ನಿವೃತ್ತ ಪ್ರಾಂಶುಪಾಲರಾದ ಎಮ್.ಎಲ್.ರಾವ್ ರವರು ಶುಭಾಶಂಸನೆ ಗೈದರು. ಪ್ರಾಧ್ಯಾಪಕರಾದ ವೈ. ಸುದರ್ಶನ ರಾವ್ ಸ್ವಾಗತಿಸಿ ಪ್ರಸ್ತಾವನೆ ಗೈದರು. ಯಕ್ಷಗಾನ ಮಂಡಳಿಯ ನಿರ್ದೇಶಕರಾದ ರವಿ ಅಲೆವೂರಾಯರನ್ನು ಶ್ರೀ ವಾಸುದೇವ ರಾಯರು ಸನ್ಮಾನಿಸಿದರು. ನಂತರ ಭೋಜನ ವ್ಯವಸ್ಥೆಯನ್ನು ಮಾಡಲಾಗಿತ್ತು. ರಾತ್ರಿ ಸಾಲಿಗ್ರಾಮ ಮೇಳ ದವರಿಂದ "ಪಂಚವಟಿ", "ದ್ರೋಣಪರ್ವ" ಹಾಗೂ "ಮೀನಾಕ್ಷಿ ಕಲ್ಯಾಣ" ಪ್ರಸಂಗದ ಯಕ್ಷಗಾನ ಬಯಲಾಟ ನಡೆಯಿತು. ಈ ಸಂದರ್ಭ ನಮ್ಮವರಾದ ಚಂದ್ರಕಾಂತ ಮೂಡುಬೆಳ್ಳೆ ಸಹಿತ 16 ಮಂದಿ ಯಕ್ಷಗಾನ ಕಲಾವಿದರನ್ನು ವೈ. ವಾಸುದೇವರಾಯರ ಕುಟುಂಬದವರು ಗುರುತಿಸಿ ಸನ್ಮಾನಿಸಿದರು. ಯಕ್ಷಗಾನ ಕಾರ್ಯಕ್ರಮದ ಸಂಯೋಜನೆಯನ್ನು ಶ್ರೀಯುತ ಶಿವಾನಂದ ಪೈಯವರು ಮಾಡಿದ್ದರು.

## ನಟರಾಜ್ ಪರ್ಕಳರವರಿಗೆ "ವಿಪ್ರ ಸಾಧಕ ಪ್ರಶಸ್ತಿ"



ಉಡುಪಿ ತಾಲೂಕು ಬ್ರಾಹ್ಮಣ ಮಹಾಸಭಾ (ರಿ.) ಇದರ ವಾರ್ಷಿಕ ಮಹಾಸಭೆಯ ಸಂದರ್ಭದಲ್ಲಿ ಪುರಾಣ ಪ್ರವಚನಕಾರ ನಟರಾಜ್ ಪರ್ಕಳ ಇವರಿಗೆ "ವಿಪ್ರ ಸಾಧಕ" ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಪ್ರಧಾನ ಮಾಡಿದ ಹಿರಿಯ ವಿದ್ವಾಂಸ ಡಾ|| ಪಾದೆಕಲ್ಲು ವಿಷ್ಣುಭಟ್‌ರವರು ಮಾತಾಡಿ ಯಕ್ಷಗಾನ, ಸಂಗೀತ ಮುಂತಾದ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪ್ರಸ್ತುತ ಮಹಾಭಾರತ ಪ್ರವಚನವನ್ನು ಉಡುಪಿ ಜಿಲ್ಲೆಯಲ್ಲಿ ಹಲವಾರು ಧಾರ್ಮಿಕ ವೇದಿಕೆಗಳಲ್ಲಿ, ದೇವಾಲಯಗಳಲ್ಲಿ, ಮಾಧ್ಯಮಗಳಲ್ಲಿ ಮಾಡಿರುವ ಮತ್ತು ಮಾಡುತ್ತಿರುವ, ಶ್ರೀಯುತ ನಟರಾಜ್ ಪರ್ಕಳರವರನ್ನು ಗೌರವಿಸಲು ಸಂತೋಷವಾಗುತ್ತದೆ ಎಂದರು. ಶ್ರೀ ಮಂಜುನಾಥ ಉಪಾಧ್ಯಾಯ, ಅಧ್ಯಕ್ಷರು, ಉಡುಪಿ ತಾಲೂಕು ಬ್ರಾಹ್ಮಣ ಸಭಾ, ಉಡುಪಿ ಹಾಗೂ ಉಡುಪಿ ಜಿಲ್ಲೆಯ ಅನೇಕ ಬ್ರಾಹ್ಮಣ ಮಹಾಸಭಾದ ವಲಯಾಧ್ಯಕ್ಷರು ಸಮಾರಂಭದಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಶುಭಕೋರಿದರು.


*With Best Compliments from :*



**Dr. Sanath S. Rao**
M.B.B.S., M.D.(Derm, Vene, Lep)
Fellow Cosmetology (St. John's Hospital)
SKIN SPECIALIST & COSMETOLOGIST

Clinic : 0820-6529474
Mobile : 9886093199
drsanathrao@gmail.com

**JALAJA SKIN CARE AND COSMETOLOGY CLINIC**
Sai Harsha Square, Koladapete (Thenkapete), Old Post Office Road, Udupi - 576 101.
Visit us at : www.jalajaskincare.com
Timings : 9-30 a.m. to 2-00 p.m., 4-30 p.m. to 8-00 p.m.
Also available at Lalith Hospital (12-30 a.m. to 2-00 p.m.)

**With Best Compliments From :**

*****Rajathadri Hotel Pvt. Ltd.**
Lodging & Boarding

Sri Ramesh Shanubhag, Usha, Sanketh and Kavitha
Directors



OUR FACILITIES
★ A/c Rooms ★ Deluxe Rooms ★ 3, 4, 5 Cot Rooms
★ Room Service ★ T.V. with Cable Connection ★ Hot Water

SHIVAJI CIRCLE, POWAI NAKA, SATARA-415001
Ph : 02162-234017, 233818
Fax : 02162-233885 E-mail : rajathadri.satara@gmail.com




ಸಮಯ ಬೆಳಗ್ಗೆ 7:00 ರಿಂದ ರಾತ್ರಿ 10:30 ರ ವರೆಗೆ

ಆದರದ ಸ್ವಾಗತ ಬಯಸುವ


ಹೋಟೆಲ್ ವೃಂದಾವನ ಕದ್ರಿ, ಮಂಗಳೂರು
ವಿನೀತ್ ಮೆಡಿಕಲ್ಸ್ ಪಡುಬಿದ್ರಿ
ವಿಶ್ವ ಟ್ರಾನ್ಸ್‌ಪೋರ್ಟ್ ಮಂಗಳೂರು
ಶ್ರೀಮತಿ ಮಧುರಾ ವ್ಯಾಸರಾಜ್ ರಾವ್ ಶ್ರೀ ಧವಳ ಎಲ್ಲೂರು

ಬನ್ನಿ... ಶುಭ ನುಡಿದು ಪ್ರೋತ್ಸಾಹಿಸಿ...

ಉತ್ತರ ಹಾಗೂ ದಕ್ಷಿಣ ಭಾರತೀಯ ಶೈಲಿಯ ಖಾದ್ಯಗಳು.

ವಿಶಾಲ ಹೊರಾಂಗಣ ಹಾಗೂ ಒಳಾಂಗಣ ವ್ಯವಸ್ಥೆಯ ಉಪಾಹಾರ ಗೃಹ

ವಿಶಾಲ ಪಾರ್ಕಿಂಗ್ ವ್ಯವಸ್ಥೆ





Owned, Published & Edited by : Sri Y. Muralikrishna Rao onbehalf of Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Designed & Printed @ SriNidhi Computer Graphics, Rajataadri, Manipal. E-mail : srisharadaudupi@gmail.com Website : www.srisharada.org